ಸಂಪಾದಕರು :
ಎಂ.ಎಸ್. ವಿಕಾಸ್

ಗುರುವಾರ, ಫೆಬ್ರವರಿ 15, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 274 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50
1974
2023

janathavani@mac.com
www.janathavani.com
08192 254736
91642 99999



# ನಂಜಪ್ಪ ಆಸ್ಪತ್ರೆಯ ತಜ್ಞ ವೈದ್ಯರ ತಂಡದಿಂದ ಯಶಸ್ವಿ ಶಸ್ತ್ರಚಿಕಿತ್ಸೆ

ದಾವಣಗೆರೆ, ಫೆ. 14- ನಗರದ ನಂಜಪ್ಪ ಆಸ್ಪತ್ರೆಯ ಕ್ಯಾನ್ಸರ್ ಚಿಕಿತ್ಸಾ (ಅಂಕಾಲಜಿ) ವಿಭಾಗವು ಅಂಡಾಶಯದ ಕ್ಯಾನ್ಸರ್ ಮತ್ತು ಸ್ತನ ಕ್ಯಾನ್ಸರ್‌ನಿಂದ ಬಳಲುತ್ತಿದ್ದ 51 ವರ್ಷದ ಮಹಿಳೆಗೆ ಕ್ಯಾನ್ಸರ್ ಶಸ್ತ್ರ ಚಿಕಿತ್ಸೆಯ ಜೊತೆಗೆ, ಸಿಆರ್‌ಎಸ್ (ಸೈಟೋರೆಡಕ್ಟಿವ್ ಶಸ್ತ್ರ ಚಿಕಿತ್ಸೆ) ಮತ್ತು ಹೈಪೆಕ್ ಎಂಬ ಸಂಕೀರ್ಣ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಗಿದೆ ಎಂದು ಮುಂಬೈನ ಟಾಟಾ ಮೆಮೋರಿಯಲ್ ಆಸ್ಪತ್ರೆಯ ಕ್ಯಾನ್ಸರ್ ಶಸ್ತ್ರಚಿಕಿತ್ಸಾ ತಜ್ಞ ಡಾ. ಎನ್. ನಿಶ್ಚಲ್ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಸಂಕೀರ್ಣ ಶಸ್ತ್ರಚಿಕಿತ್ಸೆಯನ್ನು ಸುಮಾರು 10 ಗಂಟೆಗಳ ಕಾಲ ನಡೆಸಲಾಗಿದೆ. ಪ್ರಸ್ತುತ ರೋಗಿಯ ಆರೋಗ್ಯ ಸ್ಥಿರವಾಗಿದ್ದು, ಆಸ್ಪತ್ರೆಯಿಂದ ಮನೆಗೆ ತೆರಳಿದ್ದಾರೆಂದು ಮಾಹಿತಿ ನೀಡಿದರು.

ಹೈಪರ್ಥೆಮಿಕ್ಮಿರಕ್ ಇಂಟ್ರಾಪೆರಿಟೋನಿಯಲ್ ಕೀಮೋಥೆರಫಿಯು ಅನೇಕ ಅಕ್ರಮಣಕಾರಿ ಕಿಬ್ಬೊಟ್ಟೆಯು ಕ್ಯಾನ್ಸರ್‌ಗಳಿಗೆ, ಅಪೆಂಡಿಕ್ಯುಲರ್ ಕ್ಯಾನ್ಸರ್‌ನಂತಹ ಗೆಡ್ಡೆಗಳಿಗೆ ತುಲನಾತ್ಮಕವಾಗಿ ಹೊಸ ಚಿಕಿತ್ಸೆಯ ಆಯ್ಕೆಯಾಗಿದೆ. ಕಿಬ್ಬೊಟ್ಟೆಯ ಕುಳಿಯೊಳಗೆ ಹರಡಿರುವ ಕೊಲೊರೆಕ್ಟಲ್ ಕ್ಯಾನ್ಸರ್, ಅಂಡಾಶಯದ ಕ್ಯಾನ್ಸರ್, ಹೊಟ್ಟೆಯ ಕ್ಯಾನ್ಸರ್ ಮತ್ತು ಮಸೋಥೆಲಿಯೋಮಾ ದೇಹದ ಬಹುತೇಕ ಆಂತರಿಕ ಅಂಗಾಂಗಗಳಲ್ಲಿ ವ್ಯಾಪಿಸಿರುವ ತೆಳುವಾದ ಅಂಗಾಂಶ ಪದರದಲ್ಲಿ ಕಂಡುಬರುವ ಒಂದು ಬಗೆಯ ಕ್ಯಾನ್ಸರ್ ಅನ್ನು ಈ ಚಿಕಿತ್ಸೆಯಿಂದ ನಿಯಂತ್ರಿಸಬಹುದು ಮತ್ತು ಕೆಲವೊಮ್ಮೆ ಗುಣಪಡಿಸಬಹುದು ಎಂದು ಹೇಳಿದರು.

ನಂಜಪ್ಪ ಆಸ್ಪತ್ರೆಯಲ್ಲಿ ನಮ್ಮ ತಂಡವು ಕ್ಯಾನ್ಸರ್ ಶಸ್ತ್ರಚಿಕಿತ್ಸಕರು (ಸರ್ಜಿಕಲ್ ಅಂಕಾಲಜಿಸ್ಟ್), ವೈದ್ಯಕೀಯ ಕ್ಯಾನ್ಸರ್ ತಜ್ಞರು (ಮೆಡಿಕಲ್ ಅಂಕಾಲಜಿಸ್ಟ್), ವಿಕಿರಣ ಕ್ಯಾನ್ಸರ್ ತಜ್ಞರು (ರೇಡಿಯೇಷನ್ ಅಂಕಾಲ ಜಿಸ್ಟ್) ಮತ್ತು ಕ್ಯಾನ್ಸರ್ ರೋಗಶಾಸ್ತ್ರಜ್ಞರು (ಅಂಕೋ ಪ್ಯಾಥಾಲಜಿಸ್ಟ್) ಒಳಗೊಂಡ ಸಮಗ್ರ ಟ್ಯೂಮರ್ ಬೋರ್ಡ್ ಕಾರ್ಯ ವಿಧಾನದ ಮೂಲಕ ಪ್ರತಿಯೊಬ್ಬ ರೋಗಿಗೆ ಸಾಧ್ಯವಾದಷ್ಟು ಅತ್ಯುತ್ತಮ ಚಿಕಿತ್ಸೆ ದೊರೆಯುವಂತೆ ಖಾತರಿ ವಹಿಸಲು ಶ್ರಮಿಸುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೆಡಿಕಲ್ ಅಂಕಾಲಜಿಸ್ಟ್ ಡಾ. ಪ್ರಸಾದ್ ಪಿ. ಗುಣಾರಿ, ಅರಿವಳಿಕೆ ತಜ್ಞರಾದ ಡಾ. ವಿಜಯ ಚಂದ್ರಪ್ಪ, ಪ್ರಶಾಂತ್ ತ್ರಿವೇಣಿ, ಡಾ. ಮನುದೀಪ್, ಡಾ. ಚಾರ್ವಿ ಉಪಸ್ಥಿತರಿದ್ದರು.

# ವಸತಿ ಯೋಜನೆ ಕಲ್ಪಿಸಲು ಆಗ್ರಹಿಸಿ ತುಂಗಭದ್ರಾ ನದಿ ನೀರಿಗಿಳಿದು ಪ್ರತಿಭಟನೆ



ಹರಿಹರ ಫೆ. 14- ತಾಲ್ಲೂಕಿನ ಕಡ್ಲೆಗೊಂದಿ ಹಾಗೂ ಭಾನುವಳ್ಳಿ ಗ್ರಾಮಗಳ ನಿರ್ವಸತಿಗರಿಗೆ ವಸತಿ ಯೋಜನೆ ಕಲ್ಪಿಸಲು ಆಗ್ರಹಿಸಿ ಕಳೆದ 50 ದಿನಗಳಿಂದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ನೇತೃತ್ವದಲ್ಲಿ ತಾಲ್ಲೂಕು ಕಚೇರಿ ಮುಂಭಾಗ ಧರಣಿ ನಡೆಸುತ್ತಿರುವ ಪ್ರತಿಭಟನಾಕಾರರು ಬುಧವಾರ ಹರಿಹರದ ತುಂಗಭದ್ರಾ ನದಿ ನೀರಲ್ಲಿ ನಿಂತು ಪ್ರತಿಭಟಿಸಿದ್ದು ವಿಶೇಷವಾಗಿತ್ತು.

ದಸಂಸ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 50 ದಿನಗಳಿಂದ ಎರಡೂ ಗ್ರಾಮಗಳ ಮಾದಿಗ ಹಾಗೂ ಹಿಂದುಳಿದ ಸಮುದಾಯದ ಬಡ ನಿರ್ವಸತಿಗರು ಪ್ರತಿಭಟನೆ ನಡೆಸುತ್ತಿದ್ದರೂ ತಾಲ್ಲೂಕು ಮತ್ತು ಜಿಲ್ಲಾಡಳಿತ ನೆಪಗಳನ್ನು ಹೇಳುತ್ತಾ ಸಮಯ ಕಳೆಯುತ್ತಿದೆ ಎಂದು ದೂರಿದರು.

ವಸತಿ ಯೋಜನೆ ಕಲ್ಪಿಸಲು ಜಮೀನು ಖರೀದಿ ಮಾಡುವ ಅಗತ್ಯವಿಲ್ಲ, ಎರಡೂ ಗ್ರಾಮಗಳಲ್ಲಿ ಸರ್ಕಾರಕ್ಕೆ ಸೇರಿದ ಜಮೀನಿದೆ. ನಿಯಮಾವಳಿಯಂತೆ ಪ್ರಕ್ರಿಯೆಗಳನ್ನು ಕೈಗೊಂಡು ವಸತಿ ಯೋಜನೆ ಕಲ್ಪಿಸಲು ಸಾಧ್ಯವಿದೆ, ಆದರೆ ಇದನ್ನು ಕೈಗೊಳ್ಳಲು ಅಧಿಕಾರಿಗಳು ನಿರ್ಣಯಿಸುತ್ತಿಲ್ಲ ಎಂದರು.

ಪ್ರತಿಭಟನೆಯಲ್ಲಿ ಭಾನುವಳ್ಳಿಯ ತೆಲಗಿ ಸುಶೀಲಮ್ಮ, ಶಾಂತಮ್ಮ, ರತ್ನಮ್ಮ, ಹನುಮಕ್ಕ, ಭಾಗ್ಯಮ್ಮ, ಮಲ್ಲಮ್ಮ, ಪುಷ್ಪ, ಪೂಜಾರ್ ನಾಗಮ್ಮ, ಶಕುಂತಲಾ, ಗುಣೇರ ಹನುಮಕ್ಕ, ಕಡ್ಲೆಗೊಂದಿ ಗ್ರಾಮದ ತಿಮ್ಮಣ್ಣ, ಹನುಮಂತಪ್ಪ ಎಸ್.ಟಿ., ಲಕ್ಷ್ಮಣರೆಡ್ಡಿ, ರೇಣುಕಮ್ಮ ಎ.ಕೆ., ಹಾಲಮ್ಮ, ಕರಿಬಸಮ್ಮ, ಪವಿತ್ರ, ಸಾಕಮ್ಮ, ಗಂಗಮ್ಮ, ಶೈಲೂ ಬಿ., ಗೌರಮ್ಮ, ಮಲ್ಲಮ್ಮ ಇತರರಿದ್ದರು.

# ಶ್ರೀಕ್ಷೇತ್ರ ಕಡಲಬಾಳ : ಶ್ರೀಮಧ್ವನವಮಿ ರಥೋತ್ಸವ



ದಾವಣಗೆರೆ, ಫೆ. 14 - ತಾಲ್ಲೂಕಿನ ಶ್ರೀ ಕ್ಷೇತ್ರ ಕಡಲಬಾಳು, ಶ್ರೀ ಹನುಮ ಭೀಮ ಮಧ್ವ ಸೇವಾ ಚಾರಿಟಬಲ್ ಟ್ರಸ್ಟ್‌ನಿಂದ ಇತಿಹಾಸ ಪ್ರಸಿದ್ಧ ಶ್ರೀಮಧ್ವನವಮಿ, ರಥೋತ್ಸವವನ್ನು ನಾಡಿದ್ದು ದಿನಾಂಕ 16ರಿಂದ ನಾಲ್ಕು ದಿನಗಳ ಕಾಲ ವಿವಿಧ ಕಾರ್ಯಕ್ರಮಗಳೊಂದಿಗೆ ಹಮ್ಮಿಕೊಳ್ಳಲಾಗಿದೆ.

ನಾಡಿದ್ದು ದಿನಾಂಕ 16ರ ಶುಕ್ರವಾರ ಬೆಳಿಗ್ಗೆ 6.30 ರಿಂದ ಪಂಚಾಮೃತ ಅಭಿಷೇಕ, ನಾಂದಿ ಮತ್ತು ಅಂಕುರಾರ್ಪಣೆ, ಕಂಕಣ, ಬೆಳಿಗ್ಗೆ 8.30ಕ್ಕೆ ವಾಯುಸ್ತುತಿ ಪುನಶ್ಚರಣ ಹಾಗೂ ರಾಘವೇಂದ್ರ ಅಷ್ಟೋತ್ತರ, ಬೆಳಿಗ್ಗೆ 11 ರಿಂದ ಪುಷ್ಪಾಲಂಕಾರ, ಶ್ರೀ ಸ್ವಾಮಿಗೆ ಮತ್ತು ಭಾರತೀದೇವಿಗೆ ವಿವಾಹ, ಬಲಿಹರಣ ಹಾಗೂ ಮಧ್ಯಾಹ್ನ 12ಕ್ಕೆ ವೇ|| ಪಂ. ಮಣ್ಣೂರು ಗೋಪಾಲಚಾರ್ ಇವರಿಂದ ಪ್ರವಚನ ನಡೆಯಲಿದೆ.

ಈ ನಾಲ್ಕೂ ದಿನಗಳ ಕಾರ್ಯಕ್ರಮದ ನೇತೃತ್ವವನ್ನು ವೇ|| ಪಂ|| ಕಡೂರು ಪ್ರಾಣೇಶಾಚಾರ್ ವಹಿಸುವರು.

# ಬೂದಿಹಾಳ್‌ನಲ್ಲಿ ನಾಳೆ ಎಲ್ಲಮ್ಮ ಜಾತ್ರೆ





ಮಲೇಬೆನ್ನೂರು, ಫೆ.14- ಎರೇ ಬೂದಿಹಾಳ್‌ನ ಶ್ರೀ ರೇಣುಕಾ ಎಲ್ಲಮ್ಮ ದೇವಿ ಹಾಗೂ ಶ್ರೀ ಮೈಲಾರಲಿಂಗೇಶ್ವರ ಸ್ವಾಮಿ ಜಾತ್ರಾ ಮಹೋತ್ಸವವು ನಾಡಿದ್ದು ದಿನಾಂಕ 16ರ ಶುಕ್ರವಾರ ನಡೆಯಲಿದೆ.

# ನಗರದಲ್ಲಿ ನಾಳೆ ಸವಿತಾ ಮಹರ್ಷಿ ಜಯಂತ್ಯೋತ್ಸವ



ದಾವಣಗೆರೆ, ಫೆ. 14 - ನಾಡಿದ್ದು ದಿನಾಂಕ 16ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಕೊಂಡಜ್ಜಿ ರಸ್ತೆಯಲ್ಲಿ ನಿರ್ಮಾಣದ ಹಂತದಲ್ಲಿರುವ ಶ್ರೀ ಸವಿತಾ ಮಹರ್ಷಿ ಸಮುದಾಯ ಭವನದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಶ್ರೀ ಸವಿತಾ ಮಹರ್ಷಿ ಜಯಂತ್ಯೋತ್ಸವ ಆಚರಿಸಲಾಗುವುದು ಎಂದು ಸಂಘದ ಅಧ್ಯಕ್ಷರೂ ಆದ ವಕೀಲ ಎನ್. ರಂಗಸ್ವಾಮಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಸಂವಾದ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಟ್ರಸ್ಟ್ ಸಭಾಂಗಣದಲ್ಲಿ ಇಂದು ಸಂಜೆ 6 ರಿಂದ 7.15 ರವರೆಗೆ 'ಚಿಂತನೆ-ಸಂವಾದ' ನಡೆಯಲಿದೆ.

ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಜಿ.ಡಿ. ರಾಘವನ್ ಅವರು 'ಬುದ್ಧನ ಕರುಣೆ, ಮೈತ್ರಿಯ ಚಿಂತನೆಗಳು' ಕುರಿತು ಮಾತನಾಡಲಿದ್ದಾರೆ. ಶಿವನಕೆರೆ ಬಸವಲಿಂಗಪ್ಪ, ಪ್ರೊ.ಎಂ. ಬಸವರಾಜ್, ಎಸ್. ಗುರುಮೂರ್ತಿ, ಆರ್.ಆರ್. ಕುಸಗೂರು, ಮಲ್ಲಾಬಾದಿ ಬಸವರಾಜ್ ಭಾಗವಹಿಸಲಿದ್ದಾರೆ.

# ಬೆಳ್ಳೂಡಿಯಲ್ಲಿ ಇಂದು ನೂತನ ದೇವಸ್ಥಾನ ಉದ್ಘಾಟನೆ

ಹರಿಹರ ತಾಲ್ಲೂಕಿನ ಬೆಳ್ಳೂಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಚಂದ್ರಗುತ್ತೆಮ್ಮ ದೇವಿ ದೇವಸ್ಥಾನದ ಉದ್ಘಾಟನೆ ಮತ್ತು ದೇವರಮೂರ್ತಿಗೆ ಪ್ರಾಣ ಪ್ರತಿಷ್ಠಾಪನೆ ಇಂದು ಬೆಳಿಗ್ಗೆ 10 ಗಂಟೆಗೆ ಜರುಗಲಿದೆ.

ಸಾನ್ನಿಧ್ಯ : ಶ್ರೀ ನಿರಂಜನಾನಂದ ಪುರಿ ಸ್ವಾಮೀಜಿ, ಶ್ರೀಮತಿ ಹೇಮಾವತಿ ಡಾ. ವೀರೇಂದ್ರ ಹೆಗ್ಗಡೆ, ಶ್ರೀ ವಾಲ್ಮೀಕಿ ಪ್ರಸನ್ನಾನಂದ ಪುರಿ ಸ್ವಾಮೀಜಿ, ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ, ಶ್ರೀ ಮಹಾದೇವಯ್ಯ ಒಡೆಯರ್.

ಅಧ್ಯಕ್ಷತೆ : ಗ್ರಾ.ಪಂ. ಅಧ್ಯಕ್ಷ ಬಿ.ಉಮೇಶ್, ಮುಖ್ಯ ಅತಿಥಿಗಳು : ಎಸ್.ಎಸ್.ಮಲ್ಲಿಕಾರ್ಜುನ್, ಜಿ.ಎಂ.ಸಿದ್ದೇಶ್ವರ, ಬಿ.ಪಿ.ಹರೀಶ್, ಆರ್.ಶಂಕರ್, ಎಸ್.ರಾಮಪ್ಪ, ಹೆಚ್.ಎಸ್. ಶಿವಶಂಕರ್, ನಂದಿಗಾವಿ ಶ್ರೀನಿವಾಸ್, ಚಂದ್ರಶೇಖರ್ ಪೂಜಾರ್.

# ಅಂಚೆ ಇಲಾಖೆಯಿಂದ ಸಾವರಿನ್ ಗೋಲ್ಡ್ ಬಾಂಡ್ ಯೋಜನೆ

ದಾವಣಗೆರೆ, ಫೆ. 14- ಕೇಂದ್ರ ಸರ್ಕಾರ ಆರ್.ಬಿ.ಐ ಮೂಲಕ ಅವಕಾಶ ಕಲ್ಪಿಸಲಾಗಿರುವ ಗೋಲ್ಡ್ ಬಾಂಡ್ ಸ್ಕೀಮ್ ಇಂದಿನಿಂದ ನಾಡಿದ್ದು ದಿನಾಂಕ 16ರ ತನಕ ಖರೀದಿಗೆ ಲಭ್ಯವಿದೆ ಎಂದು ಅಂಚೆ ಅಧೀಕ್ಷಕ ಚಂದ್ರಶೇಖರ್ ತಿಳಿಸಿದ್ದಾರೆ. ಅಂಚೆ ಇಲಾಖೆಯ ಬಹು ಬೇಡಿಕೆಯ ಜನಪ್ರಿಯ ಸಾವರಿನ್ ಗೋಲ್ಡ್ ಬಾಂಡ್ ಐದು ದಿನ ತನ್ನ ಗ್ರಾಹಕರಿಗೆ ಅಂಚೆ ಇಲಾಖೆ ಅವಕಾಶ ಕಲ್ಪಿಸಿದೆ. ಸಾವರಿನ್ ಗೋಲ್ಡ್ ಬಾಂಡ್ ಎಂಟು ವರ್ಷ ಮರಳಿಕೆಯ ಅವಧಿಯಾಗಿದ್ದು ಐದನೇ ವರ್ಷದ ನಂತರ ಮುಂಚಿತವಾಗಿ ಬಾಂಡ್ ಪಡೆಯಲು ಅವಕಾಶವಿದೆ.

ಬ್ಯಾಂಕ್ ಮೂಲಕ ತೊಡಗಿಸಿದ ಹಣಕ್ಕೆ ವಾರ್ಷಿಕ ಶೇ. 2.5 ಬಡ್ಡಿ ನೀಡಲಿದ್ದು, ಮೇಕಿಂಗ್ ಹಾಗು ವೇಸ್ಟೇಜ್ ಶುಲ್ಕದ ಹೊರೆ ಇರುವುದಿಲ್ಲ. ಬಂಗಾರದ ದರಕ್ಕೆ ಇರುವಂತಹ ಹಣ ಪಡೆಯಬಹುದಾಗಿದೆ.

ಒಂದು ಗ್ರಾಂ ಬಂಗಾರಕ್ಕೆ 6263 ನಿಗದಿಪಡಿಸಿದ್ದು, ಕನಿಷ್ಠ 1 ಗ್ರಾಂನಿಂದ 4 ಕೆ.ಜಿ.ವರೆಗೆ ಖರೀದಿ ಮಾಡಲು ಅವಕಾಶವಿದೆ. ಮಾಹಿತಿಗಾಗಿ ಸಮೀಪದ ಅಂಚೆ ಕಚೇರಿ ಸಂಪರ್ಕಿಸಬಹುದು.

# ಮಲೇಬೆನ್ನೂರು : ಇ-ಆಸ್ತಿ ಆಂದೋಲನ

ಮಲೇಬೆನ್ನೂರು, ಫೆ. 14- ಇಲ್ಲಿನ ಪುರಸಭೆ ವ್ಯಾಪ್ತಿಯಲ್ಲಿ ಇಂದಿನಿಂದ ಬರುವ ಮಾರ್ಚ್ 3ರವರೆಗೆ ಇ-ಆಸ್ತಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ತಿಳಿಸಿದ್ದಾರೆ.

ಇ-ಆಸ್ತಿ ಖಾತಾ ಆಂದೋಲನಕ್ಕೆ ಪಟ್ಟಣದ ನಜರು ಅರ್ಜಿ, ಅರ್ಜಿದಾರನ ಫೋಟೋ ಮತ್ತು ಮನೆ ಫೋಟೋ, ಚುನಾವಣಾ ಗುರುತಿನ ಚೀಟಿ ಅಥವಾ ಪಾನ್ ಕಾರ್ಡ್, ಆಸ್ತಿಗೆ ಸಂಬಂಧಿಸಿದ ದಾಖಲೆಗಳು, 15 ವರ್ಷಗಳ ಇಸಿ, 2023-24ರವರೆಗೆ ಪಾವತಿಸಿದ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕದ ಚಲನ್ ಪ್ರತಿ, ಭೂ ಪರಿವರ್ತನೆ ಆದೇಶ ಹಾಗೂ ಅನುಮೋದಿತ ಬಡಾವಣೆ ನಕ್ಷೆ, ದಾಖಲೆಗಳನ್ನು ಸಲ್ಲಿಸಬೇಕು.

ಆಸ್ತಿ ವಿವರಗಳನ್ನು 'ಆಸ್ತಿ ಕಣಜ' ಆನ್‌ಲೈನ್ ತಂತ್ರಾಂಶದಲ್ಲಿ ನಮೂದಿಸಲು ಅಗತ್ಯ ದಾಖಲೆಗಳನ್ನು ಸಲ್ಲಿಸಬಹುದೆಂದು ಸುರೇಶ್ ತಿಳಿಸಿದ್ದಾರೆ.

# ನಾಳೆಯಿಂದ ನಗರದಲ್ಲಿ ಗೃಹಶೋಭೆ

ದಾವಣಗೆರೆ, ಫೆ. 14 - ಅಂತರರಾಷ್ಟ್ರೀಯ ಗೃಹ ಬಳಕೆಯ ಅತೀ ದೊಡ್ಡ ಪ್ರದರ್ಶನ 'ಗೃಹಶೋಭೆ' ಫೆ. 16ರಿಂದ ಮಾ. 3 ರವರೆಗೆ ನಗರದ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ನಡೆಯಲಿದೆ.

100 ಕ್ಕೂ ಅಧಿಕ ಮಳಿಗೆಗಳು ಇದರೊಂದಿಗೆ ಫುಡ್‌ಕೋರ್ಟ್, ದೆಹಲಿಯ ಲೋಟೋಸ್ ಹೌಸ್ ಮಾದರಿ ಸೇರಿದಂತೆ ಬಗೆಬಗೆಯ ಕೇಕ್ ಶೋ, ಹಲವು ಗೇಮ್ಸ್, ಅಮ್ಯೂಸ್‌ಮೆಂಟ್ ಪಾರ್ಕ್ ಪ್ರದರ್ಶನದ ಮುಖ್ಯ ಆಕರ್ಷಣೆಗಳಾಗಿವೆ ಎಂದು ಗೃಹಶೋಭೆ ನಿರ್ದೇಶಕ ನಾಗಚಂದ್ರ ತಿಳಿಸಿದ್ದಾರೆ.

# ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕುಪತ್ರಕ್ಕಾಗಿ ಇಂದು ಪ್ರತಿಭಟನೆ

ದಾವಣಗೆರೆ, ಫೆ.14- ಬಗರ್ ಹುಕ್ಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಲು ವಿಳಂಬ ಧೋರಣೆ ಖಂಡಿಸಿ ನಾಳೆ ದಿನಾಂಕ 15ರ ಗುರುವಾರ ಜಿಲ್ಲಾಧಿಕಾರಿ ಕಚೇರಿ ಎದುರು ಜನ ಜಾನುವಾರುಗಳೊಂದಿಗೆ ಅನಿರ್ದಿಷ್ಟ ಚಳುವಳಿ ಹಾಗೂ ಜೈಲ್ ಭರೋ ಚಳವಳಿ ನಡೆಸಲು ತೀರ್ಮಾನಿಸಲಾಗಿದೆ ಎಂದು ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜಿಲ್ಲೆಯ ವಿವಿಧ ತಾಲ್ಲೂಕುಗಳ ರೈತರು 30-40 ವರ್ಷಗಳಿಂದ ಫಾರಂ 50, 53, 57 ಅರ್ಜಿ ಸಲ್ಲಿಸಿದ್ದರೂ ಇದುವರೆಗೂ ಹಕ್ಕುಪತ್ರ ವಿತರಿಸಿಲ್ಲ ಎಂದು ಆರೋಪಿಸಿದರು.

ಜಿಲ್ಲೆಯಲ್ಲಿ 2500 ಜನ ಬಗರ್ ಹುಕ್ಕುಂ ಸಾಗುವಳಿದಾರರಿದ್ದಾರೆ. ಈ ಪೈಕಿ ಜಗಳೂರು, ಹರಿಹರ ತಾಲ್ಲೂಕಿನಲ್ಲಿಯೇ ಹೆಚ್ಚು. ಇಲ್ಲಿವರೆಗೆ ಸುಮಾರು 800 ಜನರಿಗೆ ಮಾತ್ರ ಹಕ್ಕುಪತ್ರ ವಿತರಿಸಲಾಗಿದೆ ಎಂದರು.

ಹರಿಹರ ತಾಲ್ಲೂಕು ಮಲೇಬೆನ್ನೂರು, ಕೊಮಾರನಹಳ್ಳಿ, ಕೊಪ್ಪ, ಹಾಲಿವಾಣ ಇನ್ನಿತರೆ ಗ್ರಾಮಗಳಲ್ಲಿ ಜಂಟಿ ಸಮೀಕ್ಷೆ ನಡೆಸಿ, ವರದಿ ನೀಡಿದ್ದರೂ ಹಕ್ಕುಪತ್ರ ವಿತರಣೆಯಾಗಿಲ್ಲ ಎಂದರು.

ಪತ್ರಿಕಾಗೋಷ್ಠಿಯಲ್ಲಿ ರಾಂಪುರದ ಬಸವರಾಜ, ಮಾಯಕೊಂಡದ ಅಶೋಕ, ಮಂಜನಾಥ ವಕೀಲರು, ಕೋಗಳಿ ಮಂಜುನಾಥ, ಹನುಮಂತಪ್ಪ ಬಾಡ, ಬಸಣ್ಣ ಇತರರಿದ್ದರು.

# ದೇವರಬೆಳಕೆರೆ : ಸಂವಿಧಾನ ಜಾಗೃತಿ ಜಾಥಾ



ಹರಿಹರ, ಫೆ. 14 - ತಾಲ್ಲೂಕಿನ ದೇವರಬೆಳಕೆರೆ ಗ್ರಾಮದಲ್ಲಿ ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಜಾಥಾದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಸೀತಾ ಆರ್.ಟಿ., ಉಪಾಧ್ಯಕ್ಷರಾದ ಐ ಎಸ್. ಮಲ್ಲಿಕಾರ್ಜುನ್ ಹಾಗೂ ಇತರರು ಪಾಲ್ಗೊಂಡಿದ್ದರು.

# ಮಾನವೀಯತೆ ಮೆರೆದ ಅನಿತ್‌ಕುಮಾರ್

ದಾವಣಗೆರೆ, ಫೆ. 14- ತಾಲ್ಲೂಕಿನ ಎಲೆಬೇತೂರು ಗ್ರಾಮದ ಸಮೀಪ ಇಂದು ಆಕಸ್ಮಿಕವಾಗಿ ಬೈಕ್ ಅಪಘಾತದಲ್ಲಿ ಗಾಯಗೊಂಡಿದ್ದ ನಗರದ ಆಂಜನೇಯ ಬಡಾವಣೆಯ ಮಹೇಶ್ ದಂಪತಿಯನ್ನು ತಮ್ಮ ಕಾರಿನಲ್ಲಿ ಬಾಪೂಜಿ ಆಸ್ಪತ್ರೆಗೆ ಕರೆದೊಯ್ದು ಸಕಾಲಕ್ಕೆ ಗಾಯಾಳುಗಳಿಗೆ ಚಿಕಿತ್ಸೆಗೆ ಕೊಡಿಸುವ ಮೂಲಕ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪುತ್ರ ಜಿ.ಎಸ್. ಅನಿತ್ ಕುಮಾರ್ ಮಾನವೀಯತೆ ಮರೆದಿದ್ದಾರೆ.

# ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛಗೊಳಿಸಿದ ಶಿಕ್ಷಕಿ ಸಸ್ಪೆಂಡ್

ದಾವಣಗೆರೆ, ಫೆ.14- ತಾಲ್ಲೂಕಿನ ಮೆಳ್ಳೇಕಟ್ಟೆ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛಗೊಳಿಸಿದ್ದ ಶಿಕ್ಷಕಿಯನ್ನು ಮಂಗಳವಾರ ಅಮಾನತ್ತು ಮಾಡಲಾಗಿದೆ.

ಶಾಲೆಯ ಮುಖ್ಯ ಶಿಕ್ಷಕಿ ಜೊತೆಗಿದ್ದ ಮನಸ್ತಾಪದ ಕಾರಣಕ್ಕೆ ಶಿಕ್ಷಕಿ ಸಿ.ಕೆ. ಸಾವಿತ್ರಮ್ಮ ಅವರು ಸೋಮವಾರ ವಿದ್ಯಾರ್ಥಿನಿಯರಿಂದ ಶೌಚಾಲಯ ಸ್ವಚ್ಛಗೊಳಿಸಿ, ಅದನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು.

ಶಾಲಾ ಶಿಕ್ಷಣ ಇಲಾಖೆಯು ನಡೆಸಿದ ಪ್ರಾಥಮಿಕ ತನಿಖೆಯಿಂದ ಇದು ಉದ್ದೇಶಪೂರ್ವಕ ಕೃತ್ಯ ಎಂಬುದು ದೃಢಪಟ್ಟಿದ್ದರಿಂದ ಅವರನ್ನು ಅಮಾನತ್ತು ಮಾಡಲಾಗಿದೆ. ವಿದ್ಯಾರ್ಥಿನಿಯರು ಬಕೆಟ್, ಕಸಪೊರಕೆ ಹಿಡಿದು ಶೌಚಾಲಯ ಸ್ವಚ್ಛಗೊಳಿಸುತ್ತಿರುವ ದೃಶ್ಯ ವಿಡಿಯೋದಲ್ಲಿದೆ.

ದಾವಣಗೆರೆ ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಶೇರ್ ಅಲಿ ಹಾಗೂ ಸಿಬ್ಬಂದಿ ಶಾಲೆಗೆ ಭೇಟಿ ನೀಡಿ ಗ್ರಾಮಸ್ಥರು, ಎಸ್‌ಡಿಎಂಸಿ ಸದಸ್ಯರೊಂದಿಗೆ ಸಭೆ ನಡೆಸಿ ಮಾಹಿತಿ ಸಂಗ್ರಹಿಸಿದಾಗ, 'ಶಿಕ್ಷಕಿ ಸಾವಿತ್ರಮ್ಮ ಅವರೇ ಶೌಚಾಲಯ ಸ್ವಚ್ಛಗೊಳಿಸಲು ತಿಳಿಸಿದ್ದರು' ಎಂದು ವಿದ್ಯಾರ್ಥಿನಿಯರು ಹೇಳಿಕೆ ನೀಡಿದ್ದರು. ನನ್ನ ಮೇಲಿನ ಮನಸ್ತಾಪದಿಂದ ಶಿಕ್ಷಕಿಯೇ ಈ ರೀತಿ ಮಾಡಿದ್ದಾರೆ ಎಂದು ಮುಖ್ಯ ಶಿಕ್ಷಕಿ ಶೋಭಾ ದೂರಿದ್ದಾರೆ.

|| ಶ್ರೀ ನಾರದಮುನಿ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ 21.09.1980 ಮರಣ 07.02.2024

ದಾವಣಗೆರೆ ಸಿಟಿ ಎಂ.ಸಿ.ಸಿ. 'ಬಿ' ಬ್ಲಾಕ್ ವಾಸಿ

**ರಾಮಗೊಂಡನಹಳ್ಳಿ ದಿ|| ಶ್ರೀ ಹೆಚ್.ಚಂದ್ರಶೇಖರಪ್ಪ**

**ಶ್ರೀಮತಿ ಯಶೋಧಮ್ಮ ಮತ್ತು ಮಕ್ಕಳು** ಮಾಡುವ ವಿಜ್ಞಾಪನೆಗಳು.

ದಿ. : 07.02.2024ನೇ ಬುಧವಾರ ಬೆಳಗ್ಗೆ 11.ಗಂಟೆಗೆ ನನ್ನ ಮಗಳಾದ

**ಶರಣೆ ಶ್ರೀಮತಿ ಹೆಚ್.ಸಿ. ಜ್ಯೋತಿ**

(ಶ್ರೀ ಧ್ರುವ ಆರ್.ಹೆಚ್. ಇವರ ಧರ್ಮಪತ್ನಿ)

ಕೈಲಾಸ ವಾಸಿಗಳಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ : 15.02.2024ನೇ ಗುರುವಾರ ಬೆಳಿಗ್ಗೆ 10.30 ಗಂಟೆಗೆ, ಶ್ರೀ ಸದ್ಯೋಜ್ಯಾತ ಹಿರೇಮಠ, ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

**ಶ್ರೀಮತಿ ಯಶೋಧಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಹೆಬ್ಬಾಳು ವಂಶಸ್ಥರು ಹಾಗೂ ಬಂಧು-ಮಿತ್ರರು.**

ಮೊ : 99645 11985, 99800 40296

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಲು ಕೋರಿದೆ.

## 1700 ಚದುರ ಅಡಿ ಹಾಲ್ ಬಾಡಿಗೆಗೆ ಇದೆ

N.R. ರಸ್ತೆಯಲ್ಲಿರುವ ಎಸ್.ಎಸ್. ಕಾಂಪ್ಲೆಕ್ಸ್‌ನಲ್ಲಿ (ಗ್ಲಾಸ್ ಬಿಲ್ಡಿಂಗ್) ಮೊದಲ ಮಹಡಿಯಲ್ಲಿ ಬ್ಯಾಂಕ್ ಅಥವಾ ಆಫೀಸ್‌ಗೆ ಅನುಕೂಲವಾಗಿರುವ, ಫರ್ನೀಚರ್ಸ್‌ರೆಡಿ ಇರುವ 1700 ಚದುರ ಅಡಿ ಹಾಲ್ ಬಾಡಿಗೆಗೆ ಇದೆ. ವಿಚಾರಿಸಿ :


ಸಂಪರ್ಕಿಸಿ : 94813 44329, 99729 74599

|| ಶ್ರೀ ತರಗನಹಳ್ಳಿ ಬಸವೇಶ್ವರ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಸಿಟಿ ವಾಸಿ, ದಿ|| ಸಂಗಪ್ಪ ಮೇಷ್ಟ್ರು ನಿವೃತ್ತ ಶಿಕ್ಷಕರು ಇವರ ಮಗಳಾದ **ಶ್ರೀಮತಿ ನಿರ್ಮಲ ಎಸ್. ಮತ್ತು ಮಕ್ಕಳು** ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 12-2-2024ನೇ ಸೋಮವಾರ ಮಧ್ಯಾಹ್ನ 3-30 ಗಂಟೆಗೆ ನನ್ನ ಪೂಜ್ಯ ಪತಿಯವರಾದ



ಜನನ : 15-07-1947 ನಿಧನ : 12-2-2024

**ಶ್ರೀ ಕೆ. ತಿಪ್ಪಣ್ಣ**

(ಮಾಜಿ ಸೈನಿಕರು ಮತ್ತು ನಿವೃತ್ತ ಗ್ರಂಥಪಾಲಕರು, MSB ಕಾಲೇಜು, ದಾವಣಗೆರೆ.)

ಇವರು ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ದಿನಾಂಕ: 16-2-2024 ನೇ ಶುಕ್ರವಾರ ಮಧ್ಯಾಹ್ನ 12-05 ಗಂಟೆಗೆ

**ತೋಗಟವೀರ ಸಮುದಾಯ ಭವನ,** 6ನೇ ಮುಖ್ಯರಸ್ತೆ, ಎಂ.ಸಿ.ಸಿ.'ಎ' ಬ್ಲಾಕ್ ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮೃತರ ಧರ್ಮಪತ್ನಿ ಶ್ರೀಮತಿ ನಿರ್ಮಲ ಎಸ್.

ಶ್ರೀ ಎಸ್. ರಾಜಶೇಖರ್ ಮತ್ತು ಸಹೋದರರು, ಸಹೋದರಿಯರು

ಶ್ರೀ ರವೀಂದ್ರನಾಥ್ ಕೆ. ಶ್ರೀಮತಿ ಉಷಾ ಎಂ.ವಿ. ಮತ್ತು ಮಕ್ಕಳು

ಡಾ|| ರೂಪ ಕೆ.ಟಿ. ಡಾ|| ರಾಜೇಶ್ ಪಿ. ಮತ್ತು ಮಕ್ಕಳು

ಶ್ರೀಮತಿ ರೇಖಾ ಕೆ. ಶ್ರೀ ಎಸ್. ಪ್ರಕಾಶ್ ಮತ್ತು ಮಕ್ಕಳು

ಶ್ರೀಮತಿ ರಶ್ಮಿ ಕೆ.ಟಿ. ಶ್ರೀ ಕಿರಣ್ ದಿವಾಕರ್ ಮತ್ತು ಮಕ್ಕಳು

ಕುಂದೂರು ವಂಶಸ್ಥರು, ಶಾಮನೂರು ವಂಶಸ್ಥರು ಹಾಗೂ ಬಂಧು-ಮಿತ್ರರು.

ಇಂದ : ಶ್ರೀಮತಿ ನಿರ್ಮಲ ಎಸ್. # ಫ್ಲಾಟ್ ನಂ. 401, 'ಪದ್ಮಾ ಅಪಾರ್ಟ್‌ಮೆಂಟ್', ನೇತಾಜಿ ಇಂಡೋರ್ ಸ್ಟೇಡಿಯಂ ಹಿಂಭಾಗ, ಎಸ್.ಎಸ್. ಲೇ ಔಟ್ 'ಬಿ' ಬ್ಲಾಕ್, ದಾವಣಗೆರೆ. ಮೊ. : 94495 12232, 98455 68791, 98803 80503

ವಿ.ಸೂ.: ಆಹ್ವಾನ ಪತ್ರಿಕೆ ಕಳುಹಿಸಲಾಗಿದ್ದು, ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

# ಪತ್ರಕರ್ತನ ಲಕ್ಷ ರೂ. ದೋಚಿದ ಕಳ್ಳರು

ಭರಮಸಾಗರ, ಫೆ.14- ಕೆನರಾ ಬ್ಯಾಂಕ್‌ನಲ್ಲಿ ಹಣ ಡ್ರಾ ಮಾಡಿಕೊಂಡು ಬೈಕಿನಲ್ಲಿಟ್ಟಿದ್ದ 2.15 ಲಕ್ಷ ರೂ. ಹಣ ಕಳ್ಳತನವಾದ ಘಟನೆ ನಡೆದಿದೆ. ಭರಮಸಾಗರ ಪೊಲೀಸ್ ಠಾಣೆ ಅಧಿಕಾರಿಗಳು ಕಳ್ಳತನ ನಡೆದ ಸ್ಥಳ ಪರಿಶೀಲಿಸಿದರು. ಈ ವೇಳೆ ಬ್ಯಾಂಕ್ ಮುಂಭಾಗ ಸಿಸಿಟಿವಿ ಅಳವಡಿಸದ ಬಗ್ಗೆ ಪತ್ರಕರ್ತರು ಅಸಮಾಧಾನ ವ್ಯಕ್ತಪಡಿಸಿದರು. ಭರಮಸಾಗರ ವೃತ್ತ ನಿರೀಕ್ಷಕ ನಿಂಗನ ಗೌಡ್ರು ಸ್ಥಳಕ್ಕೆ ಭೇಟಿ ನೀಡಿದಾಗ ಶೀಘ್ರವೇ ಕಳ್ಳರನ್ನು ಪತ್ತೆ ಹೆಚ್ಚುವಂತೆ ಪತ್ರಕರ್ತರು ಮನವಿ ಮಾಡಿದರು. ತನಿಖೆಗೆ ತಂಡ ರಚಿಸಿದ್ದು, ವಾರದೊಳಗೆ ಕಳ್ಳರನ್ನು ಪತ್ತೆ ಹಚ್ಚುವುದಾಗಿ ನಿಂಗನ ಗೌಡ್ರು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಅನಂತ ಪದ್ಮರಾವ್, ಮಂಜುನಾಥ್, ರಾಜಣ್ಣ, ಕರಿಬಸಪ್ಪ ಇತರರು ಉಪಸ್ಥಿತರಿದ್ದರು.

# ಹೋರಿ ತಿವಿತದಿಂದ ವಿದ್ಯಾರ್ಥಿ ಸಾವು

ನ್ಯಾಮತಿ, ಫೆ.14- ಹೋರಿ ಬೆದರಿಸುವ ಸ್ಪರ್ಧೆ ವೀಕ್ಷಿಸಲು ತೆರಳಿದ್ದ ಐಟಿಐ ಕಾಲೇಜು ವಿದ್ಯಾರ್ಥಿಯೋರ್ವ ಹೋರಿ ತಿವಿತದಿಂದ ಸಾವಿಗೀಡಾದ ಧಾರುಣ ಘಟನೆ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕಿನ ಕಲ್ಮನೆ ಗ್ರಾಮದಲ್ಲಿ ಸೋಮವಾರ ನಡೆದಿದೆ. ಸಾವಿಗೀಡಾದ ವಿದ್ಯಾರ್ಥಿಯನ್ನು ನ್ಯಾಮತಿ ತಾಲ್ಲೂಕಿನ ಹೊಸಮಳಲಿ ಗ್ರಾಮದ ಪುನೀತ್ ಆಚಾರ್ (19) ಎಂದು ಗುರುತಿಸಲಾಗಿದೆ. ಈತ ಪಟ್ಟಣದ ಎಸ್‌ಎಸ್ ಐಟಿಐ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ಹಾಸ್ಟೆಲ್‌ನಲ್ಲಿ ಉಳಿದುಕೊಂಡಿದ್ದ ಎನ್ನಲಾಗಿದೆ.

ಮೃತನ ತಂದೆ ಗಜೇಂದ್ರ ಆಚಾರ್ ಸ್ಪರ್ಧೆ ಆಯೋಜಕರ ವಿರುದ್ಧ ದೂರು ನೀಡಿದ್ದು, ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

|| ಶ್ರೀ ಆಂಜನೇಯಸ್ವಾಮಿ ಪ್ರಸನ್ನ || || ಶ್ರೀ ಉಚ್ಚಂಗೆಮ್ಮದೇವಿ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಿ|| ಶ್ರೀ ಕಣಸಾಳ್ ದುರುಗಪ್ಪನವರ ಮಗನಾದ

**ಶ್ರೀ ಕಣಸಾಳ್ ಕುಬೇರಪ್ಪ ಮತ್ತು ಸಹೋದರರು**

ನಿಟುವಳ್ಳಿ, ದಾವಣಗೆರೆ.

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 03.02.2024ನೇ ಶನಿವಾರ ಬೆಳಿಗ್ಗೆ 03-30 ಗಂಟೆಗೆ ನನ್ನ ಪೂಜ್ಯ ತಾಯಿಯವರಾದ

(ದಿ|| ಶ್ರೀ ಕಣಸಾಳ್ ದುರುಗಪ್ಪ ಇವರ ಧರ್ಮಪತ್ನಿ)

**ಶ್ರೀಮತಿ ಕಣಸಾಳ್ ಹನುಮವ್ವ**

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಸಮಾರಾಧನೆ'ಯನ್ನು ದಿನಾಂಕ 15.02.2024ನೇ ಗುರುವಾರ ಬೆಳಿಗ್ಗೆ 11 ರಿಂದ 12 ಕ್ಕೆ ದಾವಣಗೆರೆ ಸಿಟಿ ನಿಟುವಳ್ಳಿ ಶ್ರೀ ದುರ್ಗಾಂಬಿಕಾ ದೇವಸ್ಥಾನದ ಹತ್ತಿರದಲ್ಲಿರುವ ಮೃತರ ಸ್ವಗೃಹದಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : **ಮೃತರ ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಮರಿ ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


# ರಾಜ್ಯಸಭೆಗೆ ಕಾಂಗ್ರೆಸ್

(5ನೇ ಪುಟದಿಂದ) ತನ್ನ ಮೂವರು ಅಭ್ಯರ್ಥಿಗಳನ್ನು ರಾಜ್ಯಸಭೆಗೆ ಕಳುಹಿಸಬಹುದಾಗಿದೆ. ಬಿಜೆಪಿ ತನಗಿರುವ ಸಂಖ್ಯಾಬಲದ ಆಧಾರದ ಮೇಲೆ ಒಬ್ಬರನ್ನು ಕಣಕ್ಕಿಳಿಸಿರುವುದರಿಂದ ಈ ನಾಲ್ವರೂ ಅವಿರೋಧವಾಗಿ ಆಯ್ಕೆಯಾಗುವುದು ಖಚಿತ.

# ಪೇದೆ ಸ್ಥಿತಿ ಗಂಭೀರ

(5ನೇ ಪುಟದಿಂದ) **ಎಸ್ಪಿ ಭೇಟಿ :** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಪೇದೆಯ ಆರೋಗ್ಯ ಸ್ಥಿತಿ ಪರಿಶೀಲಿಸಿದ್ದಾರೆ. ಈ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಘಟನೆ ಆಕಸ್ಮಿಕವೋ ಅಥವಾ ಆತ್ಮಹತ್ಯೆಗೆ ಯತ್ನವೋ ಎಂಬ ಬಗ್ಗೆ ತಿಳಿದು ಬಂದಿಲ್ಲ. ಪೇದೆಯು ಪ್ರಜ್ಞಾಸ್ಥಿತಿಗೆ ಬಂದು ಮಾಹಿತಿ ನೀಡಿದ ನಂತರವೇ ಸತ್ಯ ತಿಳಿಯಲಿದೆ ಎಂದರು.

## ದೇವೀರಮ್ಮ ನಿಧನ



ದಾವಣಗೆರೆ ಸಿದ್ದವೀರಪ್ಪ ಬಡಾವಣೆ 6ನೇ ಕ್ರಾಸ್ ವಾಸಿ ದಿ. ಬಿ. ಮಲ್ಲೇಶಪ್ಪ ಇವರ ಪತ್ನಿ ಶ್ರೀಮತಿ ದೇವೀರಮ್ಮ (87) ಇವರು, ದಿನಾಂಕ 14.02.2024ರ ಬುಧವಾರ ಮಧ್ಯಾಹ್ನ 2.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇಬ್ಬರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.02.2024ರ ಗುರುವಾರ ಮಧ್ಯಾಹ್ನ 3 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

SINCE 1942




# ಪ್ರಾರಂಭೋತ್ಸವ

ಮೆ|| ಪಾಂಡುರಂಗ ಬೊಮ್ಮಯ್ಯ ವೆರ್ಣೇಕರ್ ರವರ
ನೂತನ ಬೆಳ್ಳಿ ಬಂಗಾರದ ಅಂಗಡಿ

ಗುರುವಾರ | 15 ಫೆಬ್ರವರಿ | 2024




ನಮ್ಮ ದಾವಣಗೆರೆಯ
ವಿಶ್ವಾಸಾರ್ಹ ಬೆಳ್ಳಿ
ಬಂಗಾರದ ಅಂಗಡಿ

# 18, ವಿಜಯಲಕ್ಷ್ಮಿ ರಸ್ತೆ,
ದಾವಣಗೆರೆ

ವಿಳಾಸಕ್ಕಾಗಿ ಸ್ಕ್ಯಾನ್ ಮಾಡಿ

ಮಾಲೀಕರು : ವಿನಾಯಕ.ಪಿ.ವೆರ್ಣೇಕರ್ | ಸಂಜೀವ್.ವಿ.ವೆರ್ಣೇಕರ್

ಮೆ|| ಪಾಂಡುರಂಗ ಬೊಮ್ಮಯ್ಯ ವೆರ್ಣೇಕರ್
#18, ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ
ಫೋನ್ : 9972875535 | 9632276593

## ಕಾಂಗ್ರೆಸ್‌ನ ಪದ್ಮರಾಜ್ ಬಂಧನ

**(5ನೇ ಪುಟದಿಂದ)** ದೂರು ಕೊಟ್ಟರೂ ಈವರೆಗೂ ಏಕೆ ಬಂಧಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸದರಿ ವ್ಯಕ್ತಿಯ ನಡವಳಿಕೆಗೆ ನಾನು ಮತ್ತು ಅಶೋಕ್‌ರವರು ಫಲಾನುಭವಿಗಳಾಗಿದ್ದೇವೆ, ಪೊಲೀಸರು ಆತನ ಮನೆಬಾಗಿಲಿಗೆ ಹೋದಾಗ ಒಳಗಿನಿಂದಲೇ ಆತ ಪ್ರಭಾವಿಗಳಿಗೆ ಕರೆ ಮಾಡಿ ಶಿಫಾರಸ್ಸು ಮಾಡುತ್ತಿದ್ದಾನೆ, ಗೋಪಾಲಯ್ಯ ಅವರಿಗೆ ಬೆದರಿಕೆ ಹಾಕಿದ್ದಾನೆ ಎಂದಾದರೆ ಆತನ ಉದ್ಧಟತನದ ಮಟ್ಟವನ್ನು ಅಂದಾಜಿಸಬಹುದು ಎಂದು ಆರೋಪಿಸಿದರು.

ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮಾತನಾಡಿ, ಬೆದರಿಕೆ ಹಾಕಿದ ವ್ಯಕ್ತಿ ಕುಡಿದಿದ್ದಾನೆ. ಆತನ ನಿಶೆ ಇಳಿಯಲಿ ಎಂದು ಪೊಲೀಸರು ಕಾದು ಕುಳಿತಿರುವುದು ಹಾಸ್ಯಾಸ್ಪದ, ಈ ರೀತಿ ಕಾನೂನಿನಲ್ಲಿ ವಿನಾಯಿತಿ ನೀಡಲು ಅವಕಾಶವಿದೆಯೇ, ಪೊಲೀಸ್ ಠಾಣೆಯಿಂದ ಸ್ವಲ್ಪವೇ ದೂರದಲ್ಲಿದ್ದರೂ ಏಕೆ ಬಂಧಿಸಿಲ್ಲ, ಆರೋಪಿಗಳಿಗೆ ಪೊಲೀಸರು ರಾಜಾತಿಥ್ಯ ನೀಡುವುದು ಅಗತ್ಯವೇ, ಅಧಿಕಾರ ಯಾರಿಗೂ ಶಾಶ್ವತ ಅಲ್ಲ, ಶಾಸಕರನ್ನು ಅವಹೇಳನ ಮಾಡಿರುವ ವ್ಯಕ್ತಿ ವಿರುದ್ಧ ಮುಲಾಜಿಲ್ಲದೇ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿದರು.

ಸರ್ಕಾರದ ಪರವಾಗಿ ಉತ್ತರಿಸಿದ ಸಮಾಜ ಕಲ್ಯಾಣ ಇಲಾಖೆ ಸಚಿವ ಎಚ್.ಸಿ.ಮಹದೇವಪ್ಪ, ಸದಸ್ಯರ ಚರ್ಚೆಗಳನ್ನು ಗೃಹಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು, ಕಾನೂನು ಪಾಲನೆಯ ವಿಷಯದಲ್ಲಿ ಸರ್ಕಾರ ಯಾವುದೇ ತಾರತಮ್ಯ ಮಾಡುವುದಿಲ್ಲ, ಆ ವ್ಯಕ್ತಿ ಬಿಜೆಪಿಯಲ್ಲಿದ್ದರು, ಕಾಂಗ್ರೆಸ್‌ಗೆ ಬಂದಿದ್ದರು, ಈಗ ಯಾವ ಪಕ್ಷದಲ್ಲಿದ್ದಾರೋ ಗೊತ್ತಿಲ್ಲ, ರಾಜಕೀಯ ಹೊರತಾಗಿ ಸರ್ಕಾರ ಕ್ರಮ ಜರುಗಿಸಲಿದೆ ಎಂದು ಭರವಸೆ ನೀಡಿದರು.

ಈ ಹಂತದಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್, ನಿನ್ನೆ ರಾತ್ರಿ ಘಟನೆ ನಡೆದರೂ ಇವರನ್ನು ಏಕೆ ಬಂಧಿಸಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಆರೋಪಿಯನ್ನು ಇಂದು ಮಧ್ಯಾಹ್ನ ಇಲ್ಲ ಸಂಜೆಯೊಳಗೆ ಬಂಧಿಸಬೇಕು, ಇಲ್ಲವಾದರೆ ಸದರಿ ಠಾಣೆಯ ಇನ್ಸ್‌ಪೆಕ್ಟರ್ ಅನ್ನು ಅಮಾನತ್ತು ಮಾಡಿ ಎಂದು ಸೂಚನೆ ನೀಡಿದರು.

ಸಭಾಧ್ಯಕ್ಷರು ಆದೇಶ ನೀಡುತ್ತಿದ್ದಂತೆ ಸದನದೊಳಗೆ ಧಾವಿಸಿದ ಗೃಹ ಸಚಿವ ಪರಮೇಶ್ವರ್, ಗೋಪಾಲಯ್ಯ ಅವರ ದೂರು ಆಧರಿಸಿ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆರೋಪಿಯನ್ನು ಬಂಧಿಸಲು ಈಗಲೂ ಅವರ ಮನೆ ಮುಂದೆ ಕಾಯುತ್ತಿದ್ದಾರೆ. ಎಷ್ಟೇ ಬಾಗಿಲು ಬಡಿದರೂ ಬಾಗಿಲು ತೆಗೆಯುತ್ತಿಲ್ಲ. ಅನಿವಾರ್ಯವಾದರೆ ಬಾಗಿಲು ಒಡೆದು ಒಳಹೋಗಿ ಬಂಧಿಸಲಾಗುವುದು ಎಂದು ಸ್ಪಷ್ಟಪಡಿಸಿದರು. ಆ ವೇಳೆಗೆ ಅಧಿಕಾರಿಗಳ ಗ್ಯಾಲರಿಯಿಂದ ಬಂದ ಸಂದೇಶ ಪಡೆದು ಸ್ಪಷ್ಟನೆ ನೀಡಿದ ಗೃಹಸಚಿವರು, ಆರೋಪಿಯನ್ನು ಬಂಧಿಸಲಾಗಿದೆ ಎಂದು ಸದನಕ್ಕೆ ತಿಳಿಸಿದರು.

## ಮತ್ತೊಂದು ಸುತ್ತಿನ ಸಮೀಕ್ಷೆ : ಡಿಕೆಶಿ


**(5ನೇ ಪುಟದಿಂದ)** ನಾವು ಸೂಚನೆ ನೀಡಬೇಕಿದೆ.

ಎಷ್ಟು ಕ್ಷೇತ್ರಗಳಲ್ಲಿ ಒಬ್ಬ ಆಕಾಂಕ್ಷಿ ಇದ್ದಾರೆ ಎಂಬ ವಿಚಾರವಾಗಿ ಚರ್ಚೆ ಮಾಡಿಲ್ಲ, ನಮಗೆ ಬಂದಿರುವ ವರದಿಗಳು, ಅಭಿಪ್ರಾಯದ ಬಗ್ಗೆ ಚರ್ಚೆ ಮಾಡಿದ್ದೇವೆ.

ಎಐಸಿಸಿಗೆ ಕಳಿಸಲಾಗಿರುವ ಪಟ್ಟಿ ಬಗ್ಗೆ ಗೊಂದಲವಿದೆ ಎಂಬುದು ಸುಳ್ಳು, ನಾವು ಎಐಸಿಸಿಗೆ ಯಾವುದೇ ಪಟ್ಟಿ ನೀಡಿಲ್ಲ, ಮುಖ್ಯಮಂತ್ರಿಗಳಿಗೆ ವಿವಿಧ ವರದಿಗಳು, ಅಭಿಪ್ರಾಯಗಳ ಕುರಿತ ಅಧಿಕೃತ ಪಟ್ಟಿಯನ್ನು ಇವತ್ತಷ್ಟೇ ನೀಡಿದ್ದೇನೆ, ನಾವು ನಮ್ಮ ಪಟ್ಟಿಯನ್ನು ಗೌಪ್ಯವಾಗಿಡಬೇಕು, ಆ ಕೆಲಸ ಮಾಡುತ್ತೇವೆ.

ರಾಜಕೀಯದಲ್ಲಿ ಯಾರು ಬೇಕಾದರೂ ಸ್ಪರ್ಧಿಸಬಹುದು. ಸಚಿವರೂ ಸೇರಿದಂತೆ ಎಲ್ಲರಿಗೂ ಅವಕಾಶವಿರುತ್ತದೆ, ಪಕ್ಷ ಗೆಲ್ಲುವುದು ಮುಖ್ಯ ಎಂದರು.

# ತರಳಬಾಳು ಬೃಹನ್ಮಠದ ಚರಪಟ್ಟಾಧ್ಯಕ್ಷರಾಗಿದ್ದ ಲಿಂ. ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿಗೆ ಇಂದು 16ನೇ ಶ್ರದ್ಧಾಂಜಲಿ ಕಾರ್ಯಕ್ರಮ



ಸಿರಿಗೆರೆ ಗ್ರಾಮದ ರೈತಾಪಿ ಕುಟುಂಬದ ಶರಣ ಶಿವಲಿಂಗಯ್ಯ, ಶರಣೆ ನೀಲಮ್ಮ ದಂಪತಿಯ ಪುಣ್ಯ ಗರ್ಭದಲ್ಲಿ 1922 ಜೂನ್ 2 ನೇ ತಾರೀಕಿನಂದು ಜನಿಸಿದ್ದ ರೇವಣಸಿದ್ದಯ್ಯನವರಲ್ಲಿದ್ದ ಚುರುಕುತನ, ಧಾರ್ಮಿಕ ಶ್ರದ್ಧೆ, ಕಾಯಕ ನಿಷ್ಠೆ, ಸಾಮಾಜಿಕ ಚಿಂತನೆಗಳನ್ನು ನೋಡಿದ ತರಳಬಾಳು ಮಠದ 19 ನೇ ಜಗದ್ಗುರುಗಳಾಗಿದ್ದ ಶ್ರೀ ಗುರುಶಾಂತ ರಾಜದೇಶಿಕೇಂದ್ರ ಮಹಾಸ್ವಾಮಿಗಳು ಇವರನ್ನು ಉನ್ನತ ವ್ಯಾಸಂಗ ಮಾಡಿಸಲು ಕಾಶಿಗೆ ಕಳಿಸಿದ್ದರು.

ಶ್ರೀ ಗುರುಶಾಂತ ರಾಜದೇಶಿಕೇಂದ್ರ ಮಹಾಸ್ವಾಮಿಗಳು ಲಿಂಗೈಕ್ಯರಾದ ನಂತರ ಯಲಹಂಕ ಶಾಖಾ ಮಠದಲ್ಲಿದ್ದ ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿ 20 ನೇ ಜಗದ್ಗುರುಗಳಾದರು. ಮಠದಲ್ಲಿದ್ದ ಬೆಟ್ಟದಂತಹ ಸವಾಲು ಮತ್ತು ಸಮಸ್ಯೆಗಳನ್ನು ಎದುರಿಸಿ ಧೈರ್ಯವಾಗಿ ಮುನ್ನಡೆಯಲು ತಮ್ಮ ಜೊತೆಗೆ ಮತ್ತೊಬ್ಬ ಸಮಾಜ ಜೀವಿಗಾಗಿ ಹುಡುಕುತ್ತಿರುವಾಗ ಶ್ರೀ ಪೂಜ್ಯರ ಕೃಪಾದೃಷ್ಟಿಗೆ ಕಂಡ ಕಾಶಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಶ್ರೀ ರೇವಣಸಿದ್ದಯ್ಯನವರನ್ನು ಸಿರಿಗೆರೆ ಮಠಕ್ಕೆ ಕರೆಸಿಕೊಂಡು 1945 ನೆಯ ಜೂನ್ 23 ರಂದು ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳು ಎಂಬ ಅಭಿದಾನದಿಂದ ತರಳಬಾಳು ಜಗದ್ಗುರು ಬೃಹನ್ಮಠದ ಚರಪಟ್ಟಾಧ್ಯಕ್ಷರನ್ನಾಗಿ ನೇಮಕ ಮಾಡಿದರು. ಮಲ್ಲಿಕಾರ್ಜುನ ಶ್ರೀಗಳು ಸುದೀರ್ಘ ಕಾಲ ಕಾಯಾ, ವಾಚಾ, ಮನಸಾ ತರಳಬಾಳು ಮಠದ ಶ್ರೇಯೋಭಿವೃದ್ಧಿಗೆ ತಮ್ಮನ್ನು ತಾವು ಅರ್ಪಿಸಿಕೊಂಡಿದ್ದರು.

ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮೀಜಿಯವರು ಕಂಡ ಕನಸುಗಳನ್ನು ನನಸು ಮಾಡಲು ಎಲೆ ಮರೆಯ ಕಾಯಿಯಂತೆ, ಬೃಹನ್ಮಠದ ಜೀವನಾಡಿಯಂತೆ ಪ್ರಚಾರ ಬಯಸದೇ, ಸರ್ವಸಂಗ ಪರಿತ್ಯಾಗಿಗಳಾಗಿ, ಕಷ್ಟ ನಿಷ್ಠೂರಗಳಿಗೆ, ಸ್ತುತಿ ನಿಂದೆಗಳಿಗೆ ಎದೆಗುಂದದೆ, ಕೃಷಿ ಕಾಯಕವೇ ಪೂಜೆ ಎಂದು ನಂಬಿ ಶ್ರೀಮಠದ ಮತ್ತು ಶಾಖಾ ಮಠಗಳ ಹೆಸರಿನಲ್ಲಿದ್ದ ಜಮೀನುಗಳನ್ನೆಲ್ಲಾ ಹದ್ದು ಬಸ್ತು ಮಾಡಿಸಿ, ತಮ್ಮನ್ನು ಸಂಪೂರ್ಣ ಕೃಷಿ ಕಾಯಕಕ್ಕೆ ಅಳವಡಿಸಿಕೊಂಡು ತಾವೇ ಸ್ವತಃ ಉಳುಮೆ, ಬಿತ್ತನೆ ಮಾಡಿ, ಮಾಡಿಸಿ ಅದರಲ್ಲಿ ತೆಂಗು, ಬಾಳೆ, ಅಡಿಕೆ, ಹಲಸು ಮತ್ತು ಮಾವು ಇತ್ಯಾದಿ ಗಿಡ - ಮರ - ಪೈರುಗಳನ್ನು ಬೆಳಸಿ, ಇಡೀ ಜಮೀನುಗಳಲ್ಲಿ ಹಚ್ಚ ಹಸಿರು ಕಂಗೊಳಿಸುವಂತೆ ಮಾಡಿದ್ದಲ್ಲದೇ, ಶ್ರೀ ಮಠಕ್ಕೆ ಲಕ್ಷಾಂತರ ರೂಪಾಯಿಗಳ ಶಾಶ್ವತ ಆದಾಯ ಬರುವಂತೆ ಮಾಡಿದ ಶ್ರೀಗಳು, ಪ್ರಗತಿ ಪರ ಕೃಷಿಕರಾಗಿ, ಕೃಷಿ ಋಷಿ, ಕೃಷಿ ತಪಸ್ವಿ, ಕಾಯಕ ಯೋಗಿ, ಕರ್ಮಯೋಗಿ ಮುಂತಾದ ಕೃಷಿ ಬಿರುದುಗಳಿಗೆ ಪಾತ್ರರಾಗಿದ್ದಲ್ಲದೇ, ಪೂಜ್ಯರು ಕೃಷಿ ಸಂತರಾಗಿ, ಕೃಷಿ ತಜ್ಞರಾಗಿ ಕೃಷಿ ಜ್ಞಾನವನ್ನು ಧಾರೆಯರೆದು ಅವರ ಸತ್ಯ ಶುದ್ಧ ಕಾಯಕದಿಂದ ಮಠದ ಅಭಿವೃದ್ಧಿಗೆ ಕೈ ಜೋಡಿಸಿದರು ಲಿಂಗೈಕ್ಯ ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು.

ಶ್ರೀಗಳು ಶ್ರೀ ಮಠದಲ್ಲಿ ಪಟ್ಟಾಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ ಮಠದ ಆರ್ಥಿಕ, ಸಾಮಾಜಿಕ ಪರಿಸ್ಥಿತಿ ಅಷ್ಟಾಗಿ ಉತ್ತಮ ಸ್ಥಿತಿಯಲ್ಲಿರದೇ ದುಗ್ಗಾಣಿ ಮಠವಾಗಿತ್ತು. ಅಂತಹ ಸಂದರ್ಭದಲ್ಲಿ ಗ್ರಾಮೀಣ ಪ್ರದೇಶದಲ್ಲಿಯೇ ಹೆಚ್ಚಾಗಿ ಇದ್ದ ಶ್ರೀ ಮಠದ ಭಕ್ತರನ್ನು ಕಾಣಲು ಹಳ್ಳಿ - ಹಳ್ಳಿಗಳಿಗೆ, ಮನೆ - ಮನೆಗಳಿಗೆ ವಾಹನ ಸೌಕರ್ಯಗಳಿಲ್ಲದಿದ್ದರೂ ಎತ್ತು ಬಂಡಿ ಕಟ್ಟಿಕೊಂಡು ಹೋಗಿ ಅಲ್ಲಿಯೇ ದೇವಸ್ಥಾನಗಳಲ್ಲಿ 4-5 ದಿನಗಳವರೆಗೆ ಬಿಡಾರ ಹೂಡಿ ಶ್ರೀ ಮಠಕ್ಕೆ ಬೇಕಾಗುವ 'ದವಸ - ದಾನ್ಯಗಳನ್ನು, ಹಣವನ್ನು, ಕಾಣಿಕೆ'ಗಳನ್ನು ಭಕ್ತರಿಂದ ಸಂಗ್ರಹಿಸಿಕೊಂಡು ಬರುತ್ತಿದ್ದ ಶ್ರೀಗಳು 'ಸಂಚಾರ ಮೂರ್ತಿ' ಯೇ ಆಗಿದ್ದರು. ಇದರ ಜೊತೆಗೆ ಭಕ್ತರು ಏರ್ಪಡಿಸುತ್ತಿದ್ದ ವಿವಿಧ ರೀತಿಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಭಕ್ತರಿಗೆ ಇಷ್ಟಲಿಂಗ ಪೂಜೆ, ಸತ್ಯ - ಶುದ್ಧ - ಕಾಯಕದ ಮಹತ್ವದ ಬಗ್ಗೆ ತಿಳಿಹೇಳುವುದರೊಂದಿಗೆ ಸೋಮಾರಿತನದಿಂದ, ಮೂಢನಂಬಿಕೆಯಿಂದ, ದುಶ್ಚಟಗಳಿಂದ ದೂರವಿರಲು ಉಪದೇಶಿಸುತ್ತಿದ್ದರು. ಶ್ರೀಗಳ ವರ ಸತ್ಯ, ಶುದ್ಧ, ಕಾಯಕ ದಿಂದ 'ಸಿರಿಗೆರೆ ಮಠ ಕೃಷಿ ಮಠ, ಸಿರಿವಂತ ಮಠವಾಗಲು' ಜಗದ್ಗುರುಗಳವರೊಂದಿಗೆ ಹಗಲು - ಇರುಳುಗಳನ್ನು ಒಂದು ಮಾಡಿ, ಶ್ರೀ ಮಠದ ಶ್ರೇಯೋಭಿವೃದ್ಧಿಗೆ ನಿರಂತರವಾಗಿ ದುಡಿದು ಆತ್ಮ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಸಾಧಿಸಿದ ಸಾಧಕರು.

ಹೀಗೆ ಸಮಾಜದ ಸಮಷ್ಠಿಯ ಹಿತಕ್ಕಾಗಿ ದುಡಿದು ಜನ ಮಾನಸದಲ್ಲಿ ಶಾಶ್ವತವಾಗಿ ಉಳಿದು ಅಮರರೆನಿಸಿದ ಮೆದು ಮಾತಿನ, ಮೃದು ಹೃದಯದ ಲಿಂಗೈಕ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರ 16ನೇ ವರ್ಷದ ಶ್ರದ್ಧಾಂಜಲಿ ಕಾರ್ಯಕ್ರಮವು ದಿನಾಂಕ : 15-02-2024 ರಂದು ನಡೆಯಲಿದೆ. ಪೂಜ್ಯ ಶ್ರೀಗಳಿಗೆ ಭಕ್ತಿ ಪೂರ್ವಕ ನಮನಗಳು.

**- ಕೊಂಡಜ್ಜಿ ಬಣಕಾರ್ ಶಿವಕುಮಾರ್,**
ವಕೀಲರು, ದಾವಣಗೆರೆ

# ಲಂಬಾಣಿ ಜನಾಂಗದ ಅಭಿವೃದ್ಧಿಗೆ ಸರ್ಕಾರ ಬದ್ಧ

**(5ನೇ ಪುಟದಿಂದ)** ನಿರ್ಮಾಣ, ಹಳೇಜೋಗದಿಂದ ಚಿನ್ನಿಕಟ್ಟೆವರೆಗೆ ದ್ವಿಪಥ ರಸ್ತೆ ನಿರ್ಮಾಣವಾಗ ಬೇಕಾಗಿದೆ ಎಂದರು. ವಿಧಾನ ಪರಿಷತ್ತಿನ ಶಾಸಕ ಪ್ರಕಾಶ್ ಕೆ. ರಾಥೋಡ್ ಮಾತನಾಡಿ, ಬಂಜಾರ ಸಮುದಾಯದ ಅಭಿವೃದ್ಧಿಗೆ 390 ಕೋಟಿ ಅನುದಾನವನ್ನು ಸಿದ್ದರಾಮಯ್ಯ ನೀಡಿದ್ದಾರೆ. ಯಾವುದೇ ಸಮಾಜ ಅಭಿವೃದ್ಧಿಯಾಗಬೇಕಾದರೆ ಸಂಘಟನೆ ಅನಿವಾರ್ಯ ಅಂತಹ ಸಂಘಟನೆ ನಮ್ಮ ಸಮಾಜದಲ್ಲಿದೆ ನಾವು ಯಾವುದೇ ಪಕ್ಷ ಇರಲಿ ನಾವು ಸಮಾಜಕ್ಕಾಗಿ ಒಂದಾಗುತ್ತೇವೆ ಅದಕ್ಕೆ ನಮಗೆಲ್ಲ ಹೆಮ್ಮೆ ಇದೆ ಎಂದರು.

ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ್ ಮಾತನಾಡಿ, ಬಂಜಾರ ಸಮಾಜದ ನಾವುಗಳು ಶ್ರಮಜೀವಿಗಳಾಗಿ ಸ್ವಾಭಿಮಾನಿಗಳಾಗಿ ಜೀವನ ಸಾಗಿಸುತ್ತಿದ್ದೇವೆ. ಹಾಗಾಗಿ ಇತರೆ ಸೋದರ ಸಮಾಜಗಳನ್ನು ನಮ್ಮನ್ನು ಗೌರವದಿಂದ ಕಾಣುತ್ತಿವೆ ಎಂದರು.

ಶಾಸಕ ಡಿ.ಜಿ.ಶಾಂತನಗೌಡ ಅಧ್ಯಕ್ಷತೆ ವಹಿಸಿ ನಾತನಾಡಿ, 2013 ರಲ್ಲಿ ಬಂಜಾರ ಸಮುದಾಯದ ಅಭಿವೃದ್ಧಿಗೆ ಸಾಕಷ್ಟು ಅನುದಾನವನ್ನು ನೀಡಿದ್ದೇನೆ. ಬಗರ್ ಹುಕ್ಕುಂ ಸಾಗುವಳಿದಾರರ ಮನವೊಲಿಸಿ 13 ಎಕರೆ ಜಾಗವನ್ನು ಕೊಡಿಸಿದ್ದೇನೆ ಎಂದರು.

ಕಲ್ಬುರ್ಗಿ ಸಂಸದ ಉಮೇಶ್ ಜಿ.ಜಾಧವ್, ಎಂ.ಪಿ.ರೇಣುಕಾಚಾರ್ಯ, ಜನ್ಮಸ್ಥಾನದ ಮಹಾಮಠ ಸಮಿತಿಯ ಪ್ರಧಾನ ಧರ್ಮದರ್ಶಿ ಬಿ.ಹೀರಾನಾಯ್ಕ್ ಮಾತನಾಡಿದರು.

ವೇದಿಕೆಯಲ್ಲಿ ಮಹಾರಾಷ್ಟ್ರದ ಬಾಬುಸಿಂಗ್ ಮಹಾರಾಜ್, ಸಿದ್ದಲಿಂಗ ದೇವರು, ಮಾಜಿ ಶಾಸಕರಾದ ಅಶೋಕ್ ನಾಯ್ಕ್, ಪಿ.ಟಿ.ಪರಮೇಶ್ವರ ನಾಯ್ಕ್, ಸಮಿತಿಯ ನಿರ್ವಹಣಾ ಸಮಿತಿಯ ಅಧ್ಯಕ್ಷ ಹನುಮಂತನಾಯ್ಕ್, ಪ್ರಧಾನ ಕಾರ್ಯ ದರ್ಶಿ ಎನ್. ಅರುಣ್‌ಕುಮಾರ್, ಡಾ.ಈಶ್ವರ್‌ನಾಯ್ಕ್, ರಾಘವೇಂದ್ರನಾಯ್ಕ್, ಮಾರುತಿನಾಯ್ಕ್, ಸುರೇಂದ್ರನಾಯ್ಕ್, ಜಿ.ಎಸ್.ಅಮಿತ್‌ಕುಮಾರ್, ಜಿ.ಎಂ.ಲಿಂಗರಾಜ್, ತಾಂಡಾಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಎಲ್.ಶಿವಶಂಕರ್ ನಾಯ್ಕ್, ಜಿಲ್ಲಾಧಿಕಾರಿ ವೆಂಕಟೇಶ್, ಎಸಿ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್ಗಳಾದ ಪಟ್ಟರಾಜೇಗೌಡ, ಗೋವಿಂದಪ್ಪ ಮತ್ತಿತರರು ಉಪಸ್ಥಿತರಿದ್ದರು.

### ಮುಂದಿನ ಜಯಂತಿಗೆ ರೈಲಿನಲ್ಲಿ ಬರುವಂತಾಗುವ ವ್ಯವಸ್ಥೆ : ಬಿ.ವೈ.ರಾಘವೇಂದ್ರ

ಮೊಟ್ಟ ಮೊದಲ ಬಾರಿಗೆ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು 2 ಕೋಟಿ ಅನುದಾನ ನೀಡಿ ಸಂತ ಸೇವಾಲಾಲರ ಜನ್ಮ ಜಯಂತಿ ಕಾರ್ಯಕ್ರಮಕ್ಕೆ ಅನುವು ಮಾಡಿಕೊಟ್ಟಿದ್ದನ್ನು ಸಂಸದ ಬಿ.ವೈ.ರಾಘವೇಂದ್ರ ಸ್ಮರಿಸಿದರು.

ತಾಂಡಾಭಿವೃದ್ಧಿ ನಿಗಮವನ್ನು ಪ್ರತ್ಯೇಕವಾಗಿ ರಚಿಸುವ ಮೂಲಕ ಸಂತ ಸೇವಾಲಾಲ್ ಜನ್ಮಸ್ಥಳ ಸೇರಿದಂತೆ ಸಮಾಜದ ಅಭಿವೃದ್ಧಿಗೆ ಹರಿಹರ-ರಾಣೇಬೆನ್ನೂರು ಹಾಗೂ ಶಿಕಾರಿಪುರದ ರೈಲ್ವೆ ಮಾರ್ಗವನ್ನು ಸಂತ ಸೇವಾಲಾಲ್ ಅವರ ಜನ್ಮಸ್ಥಾನಕ್ಕೆ ಸಂಪರ್ಕಿಸುವ ಉದ್ದೇಶದಿಂದ ಭಾಯಾಘಡ್ ರೈಲ್ವೆ ನಿಲ್ದಾಣ ಮಾಡಿಸುತ್ತಿದ್ದು ಮುಂದಿನ ಜಯಂತಿ ಕಾರ್ಯಕ್ರಮದ ಒಳಗೆ ನೀವು ರೈಲಿನಲ್ಲಿ ಬರುವಂತಾಗುವ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.

## ಸಾಂಸ್ಕೃತಿಕ ಕಲೆಗಳಲ್ಲೂ ತೊಡಗಿಸಿಕೊಳ್ಳಿ

**(5ನೇ ಪುಟದಿಂದ)** ಯಶಸ್ವಿಯಾಗಿ ನಡೆದು ಬರುತ್ತಿದ್ದು, ಈ ಕಾರ್ಯಕ್ರಮಕ್ಕೆ ತಾವು ನೀಡುತ್ತಿರುವ ಸಹಕಾರ, ಪ್ರೋತ್ಸಾಹ, ಮುಖ್ಯ ಕಾರಣ ಎಂದು ತಿಳಿಸಿದರು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಹೆಚ್ಚು ಇಂತಹ ಕಾರ್ಯಕ್ರಮಗಳನ್ನು ನಡೆಸಿ, ಸಮಾಜದ ಸದಸ್ಯರಿಗೆ ವಿವಿಧ ತರದಲ್ಲಿ ಸಹಾಯ ಮಾಡಲು ಅನುಕೂಲವಾಗುತ್ತದೆ, ಎಂದು ಹೇಳಿ, ಪ್ರಭು ಶ್ರೀರಾಮಚಂದ್ರನ ಕೃಪೆ ಸಂಸ್ಥೆಯ ಮೇಲೆ ಇದೆ ಎಂದು ಈ ಸಂದರ್ಭದಲ್ಲಿ ಹಾರೈಸಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಬ್ರಾಹ್ಮಣ ಸೇವಾ ಸಂಘದ ಮಾಜಿ ಅಧ್ಯಕ್ಷ ಎಸ್.ಪಿ ಸತ್ಯನಾರಾಯಣ ರಾವ್ ಅವರನ್ನು ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಸಮಾಜ ಬಾಂಧವರಿಗೆ ನಡೆಸಿದ ಆನ್‌ಲೈನ್ ರಸಪ್ರಶ್ನೆ ಕಾರ್ಯಕ್ರಮದ ಬಹುಮಾನ ವಿತರಣೆಯನ್ನು ವಿಜೇತರಿಗೆ ನೀಡಲಾಯಿತು.

ಸಂಸ್ಥೆಯು 'ಆರೋಗ್ಯ ನಿಧಿ' ಎಂಬ ಯೋಜನೆಯನ್ನು ಬಿಡುಗಡೆಗೊಳಿಸಿದ್ದು, ಆರೋಗ್ಯ ನಿಧಿಗೆ ಧನ ಸಹಾಯ ಮಾಡಿದ ಎಲ್ಲರಿಗೂ ಈ ಸಂದರ್ಭದಲ್ಲಿ ಪ್ರಮಾಣ ಪತ್ರ ನೀಡಿ ಗೌರವಿಸಲಾಯಿತು.

ವಿಜೇಷ್ ಕೊಲ್ಲೂರ್ ಮತ್ತು ವಸಂತ ಕೊಪ್ಪ ಸ್ವಾಗತಿಸಿದರು. ಸಹ ಕಾರ್ಯದರ್ಶಿ ಅನಿಲ್ ಬಾರೆಂಗಳ್ ನಿರೂಪಿಸಿದರು.

## ಮೊದಲ ವಾರವೇ ಕಾಂಗ್ರೆಸ್ ಪಟ್ಟಿ

**(5ನೇ ಪುಟದಿಂದ)** ಲೋಕಸಭಾ ಕ್ಷೇತ್ರಗಳ ಚುನಾವಣೆಗೆ ಮಾರ್ಚ್ 10 ರಂದು ಅಧಿಸೂಚನೆ ಹೊರಬೀಳುವ ಸಾಧ್ಯತೆ ಇದೆ.

ಈ ಹಿನ್ನೆಲೆಯಲ್ಲಿ ಅಧಿಸೂಚನೆಗೂ ಮುನ್ನವೇ ಅಭ್ಯರ್ಥಿಗಳನ್ನು ಪ್ರಕಟಿಸಲು ಸಭೆ ತೀರ್ಮಾನಿಸಿದೆ. ಕನಿಷ್ಠ 25 ಕ್ಷೇತ್ರಗಳನ್ನು ಗೆಲ್ಲಲೇಬೇಕೆಂದು ಪಣ ತೊಟ್ಟಿರುವ ಕೆಪಿಸಿಸಿ, ಗೆಲುವನ್ನೇ ಮಾನದಂಡವಾಗಿಟ್ಟುಕೊಂಡು ಅಭ್ಯರ್ಥಿಗಳ ಆಯ್ಕೆ ಸಂಬಂಧ ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರು ಸಮಿತಿಗೆ ಮಾಹಿತಿ ನೀಡಿದ್ದಾರೆ.

ಈ ಮಾಹಿತಿ ಆಧಾರದ ಮೇಲೆ 18 ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ, ಆದರೆ ಇದು ಅಂತಿಮವಲ್ಲ.

ಈ ಸಂಭವನೀಯ ಅಭ್ಯರ್ಥಿಗಳ ಹೆಸರೂ ತೃಪ್ತಿದಾಯಕವಾಗಿಲ್ಲದ ಹಿನ್ನೆಲೆಯಲ್ಲಿ ಮತ್ತೊಂದು ಸುತ್ತಿನ ಸಮೀಕ್ಷೆ ನಡೆಸಿ ವರದಿ ಪಡೆದುಕೊಳ್ಳಲು ತೀರ್ಮಾನಿಸಲಾಗಿದೆ. ಎಐಸಿಸಿಯ ಚುನಾವಣಾ ಸಮಿತಿ ಸಭೆ ಸೇರುವುದಕ್ಕೂ ಮುನ್ನ ಎಲ್ಲಾ ಕ್ಷೇತ್ರಗಳಿಗೂ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ಶಿಫಾರಸು ಮಾಡಲು ನಿರ್ಧರಿಸಲಾಗಿದೆ. ರಾಜ್ಯದ ಶಿಫಾರಸ್ಸುಗಳ ಬಗ್ಗೆ ಎಐಸಿಸಿ ತೆಗೆದುಕೊಳ್ಳುವ ತೀರ್ಮಾನದ ನಂತರ ಅಭ್ಯರ್ಥಿಗಳ ಹೆಸರು ಪ್ರಕಟಗೊಳ್ಳಲಿದೆ.


**ಸೈಟು ಮಾರಾಟಕ್ಕಿದೆ**
ಕುಂದುವಾಡದ ತುಂಗಭದ್ರಾ ಬಡಾವಣೆಯಲ್ಲಿ ಉತ್ತರ ಮುಖವುಳ್ಳ 20×30 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ :
97416 84666, 82177 98233

**ಸೈಟುಗಳು ಮಾರಾಟಕ್ಕಿವೆ**
ಎಸ್.ಎಸ್. ಬಡಾವಣೆಯ 'ಎ' ಬ್ಲಾಕ್ ಪೂರ್ವ 40x60, ಎಸ್.ಎಸ್. 'ಬಿ' ಬ್ಲಾಕ್ ಉತ್ತರ 40x60, ಶಿವ-ಪಾರ್ವತಿ ಬಡಾವಣೆ ಪೂರ್ವ 30x55, 30x70, 40x70, 40x60, (ಅಕ್ಕ-ಪಕ್ಕ) ಪಶ್ಚಿಮ 30x55, ಬನಶಂಕರಿ ಬಡಾವಣೆ ಪೂರ್ವ-ದಕ್ಷಿಣ ಕಾರ್ನರ್ 30x50 (60 ಅಡಿ ರಸ್ತೆ) ಜೆ.ಹೆಚ್. ಪಟೇಲ್ ಬಡಾವಣೆ (ನಾಗನೂರು ರಸ್ತೆ) ಪೂರ್ವ 30x50
ಐಗೂರು ವಿಜಯಕುಮಾರ
99457 02495

**ಮನೆ ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 30x50 ಪೂರ್ವ ದಿಕ್ಕಿನ ಮನೆ ಗ್ರೌಂಡ್ ಫ್ಲೋರ್‌ನಲ್ಲಿ 2 BHK ಮನೆ, ಮೊದಲನೇ ಮಹಡಿಯಲ್ಲಿ ರೂಂ ವಿತ್ ಅಟ್ಯಾಚ್ಡ್ ಬಾತ್ ರೂಂ ಇರುವ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ.
9060081281

**ಸೈಟು ಮಾರಾಟಕ್ಕಿದೆ**
ದಾವಣಗೆರೆಯ ಬೈಪಾಸ್ ಹೆದ್ದಾರಿ, ರಾಸ್ತಾ ಹೋಟೆಲ್ ಹಿಂಭಾಗ, ಡಾಲರ್ಸ್ ಕಾಲೋನಿಯಲ್ಲಿ 30x47 ಅಳತೆಯ ಸೈಟು ಮಾರಾಟಕ್ಕಿದೆ ಸಂಪರ್ಕಿಸಿ.
98440 60736

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ Part time ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
(ವಯೋಮಿತಿ : 25 ರಿಂದ 30 ವರ್ಷ)
ಸಮಯ : ಸಂಜೆ 7.30 ರಿಂದ ರಾತ್ರಿ 10.30
ಮೊ. 97385-23711

**ಮನೆ ಬಾಡಿಗೆಗೆ ಇದೆ**
ಹೊಂಡದ ಸರ್ಕಲ್‌ನ ಖಂಡಪ್ಪನ ಗಲ್ಲಿಯಲ್ಲಿ 13x45 ಅಳತೆಯ ಒಂದನೇ ಮಹಡಿ ಮನೆ ಸೋಲಾರ್, ನೀರು ಸೌಲಭ್ಯವಿರುವ ಮನೆ ಬಾಡಿಗೆಗೆ ಇದೆ.
94480 47506

**ಮನೆ ಮಾರಾಟಕ್ಕೆ ಇದೆ**
ಶ್ರೀ ಪಂಡಿತ್ ಗೊಸಾವಿ ನಿವಾಸ, 3ನೇ ಮುಖ್ಯ ರಸ್ತೆ, ಶಾಂತಿ ನಗರ, ರಿಂಗ್ ರಸ್ತೆ ಹತ್ತಿರ ದಾವಣಗೆರೆ ಇಲ್ಲಿ ಮನೆ ಮಾರಾಟಕ್ಕೆ ಇದೆ. ಆಸಕ್ತರು ಸಂಪರ್ಕಿಸಿ.
ಮೊ : 88808-47023

**ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಬಿ' ಬ್ಲಾಕ್ ಪೂರ್ವ-ದಕ್ಷಿಣ ಕಾರ್ನರ್ 44x60, ಜಯನಗರ ಪೂರ್ವ-ಉತ್ತರ ದಕ್ಷಿಣ 60x80, ಪೂರ್ವ-ಉತ್ತರ ಕಾರ್ನರ್ 88x60 (ಕಮರ್ಷಿಯಲ್ ಜಾಗ) ಶಕ್ತಿ ನಗರ ಪೂರ್ವ 30x40 (ಅಕ್ಕ-ಪಕ್ಕ)
ಐಗೂರು ವಿಜಯಕುಮಾರ
99457 02495

**ಮನೆಗಳು ಮಾರಾಟಕ್ಕಿವೆ**
ತರಳಬಾಳು ಬಡಾವಣೆ ಪೂರ್ವ 30x50 (ಡುಪ್ಲೆಕ್ಸ್) ಶಿವ-ಪಾರ್ವತಿ ಬಡಾವಣೆ ಪಶ್ಚಿಮ 30x45 (ಡುಪ್ಲೆಕ್ಸ್) ಎಸ್.ಎಸ್. 'ಬಿ' ಬ್ಲಾಕ್ ದಕ್ಷಿಣ 30x40 (ಡುಪ್ಲೆಕ್ಸ್)
ಐಗೂರು ವಿಜಯಕುಮಾರ
99457 02495

**ಹೋಟೆಲ್ ಉದ್ಯಮಕ್ಕೆ ಕೆಲಸಗಾರರು ಬೇಕಾಗಿದ್ದಾರೆ**
ಕ್ಲರ್ಕ್ಸ್ ಇನ್
ಶಾಮನೂರು ರಸ್ತೆ, ದಾವಣಗೆರೆ
70190 51306

**2 BHK ಮನೆ ಬಾಡಿಗೆಗೆ**
ಪಿ.ಜೆ. ಬಡಾವಣೆ, # 397ರ 8ನೇ ಕ್ರಾಸ್, 8ನೇ ಮೇನ್ ರೋಡ್, 1ನೇ ಮಹಡಿಯ, 20x40 ಅಳತೆಯ, ಅಟ್ಯಾಚ್ಡ್ ಬೆಡ್ ರೂಮ್, ಓಪನ್ ಕಿಚನ್, ಹಾಲ್ ( ಸಸ್ಯಹಾರಿಗಳಿಗೆ ಮಾತ್ರ)
78927 53714, 90603 20888

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಹುಡುಗರು ಬೇಕಾಗಿದ್ದಾರೆ**
ಕನ್ನಡ ಭಾಷಾ ಜ್ಞಾನ ಮತ್ತು ಟೈಪಿಂಗ್ ಅನುಭವವಿರುವವರು ಬೇಕಾಗಿದ್ದಾರೆ ಸಂಪರ್ಕಿಸಿ :
ಬೆಳಿಗ್ಗೆ 11 ರಿಂದ ಸಂಜೆ 5.30ರವರೆಗೆ
08192 254736

**ಬೇಕಾಗಿದ್ದಾರೆ**
BAMS ಡ್ಯೂಟಿ ಡಾಕ್ಟರ್ಸ್
GNM / ANM
80951 79034

**ಮನೆ ಬಾಡಿಗೆಗಿದೆ**
2 ಬೆಡ್ ರೂಂ ಇರುವ ಗೀತಾಂಜಲಿ ನಿವಾಸ, # 2041, ಎಂಸಿಸಿ ಬಿ ಬ್ಲಾಕ್, 11ನೇ ಮೇನ್, 8ನೇ ಕ್ರಾಸ್, ಬಿಡಿಇಟಿ ಕಾಲೇಜ್ ರಸ್ತೆ, ವಿನಾಯಕ ಕ್ಲಿನಿಕ್ ಹತ್ತಿರ
63628 47140
98806 47830

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ: **ಪ್ರಕಾಶ ಟಿವಿ ಸೆಂಟರ್**
ಕುರುಬರ ಹಾಸ್ಟೆಲ್ ಎದುರು, ಶ್ರೀಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**ಸೈಟು ಮಾರಾಟಕ್ಕಿವೆ**
30x59 ದಕ್ಷಿಣ 40 ಅಡಿ ರಸ್ತೆಗೆ (ಕಾರ್ನರ್ ಸೈಟಿನ ಪಕ್ಕ) ಆಟದ ಮೈದಾನ ಮತ್ತು ಪಾರ್ಕ್‌ನ ಸಮೀಪ ಹರಿಹರದ KHB ಲೇಔಟ್, ಅಮರಾವತಿ ಕಾಲೋನಿ, ಚ.ಅಡಿಗೆ ರೂ. 2750/- ರಂತೆ. ಸಂಪರ್ಕಿಸಿ :
99802 00664, 94495 81264

**ಬಾಡಿಗೆಗೆ ಮನೆ ಬೇಕಾಗಿದೆ**
3 BHK ಇಂಡಿಪೆಂಡೆಂಟ್ OR Duplex ಮನೆ, ಜಯನಗರ, ಶಕ್ತಿ ನಗರ, ಭೂಮಿಕಾ ನಗರ.
94812 80169

**ಅಂಗಡಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
(ದಾವಣಗೆರೆ)
ಸಂಪರ್ಕಿಸಿ.
94486 67388

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಬೇಕಾಗಿದ್ದಾರೆ**
ಮನೆಯಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿ, ಭೇಟಿಯ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5 ರವರೆಗೆ. ಸಂಪರ್ಕಿಸಿ :
08192 254736

**ಘನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ. ಇವರ ನ್ಯಾಯಾಲಯ ದಾವಣಗೆರೆ.**
ಕ್ರಿಮಿಸ್.ಸಂಖ್ಯೆ 55/2024
**ಅರ್ಜಿದಾರರು :** 1) ಶ್ರೀಮತಿ ಗೀತಾ ಎಸ್. ಗಂಡ ಲೇಟ್ ಶಶಿಕುಮಾರ್, 37 ವರ್ಷ, ಗೃಹಿಣಿ, 2) ಜೀವನ್ ಎಸ್. ತಂದೆ ಲೇಟ್ ಶಶಿಕುಮಾರ್, 24 ವರ್ಷ, ವಿದ್ಯಾರ್ಥಿ, 3. ನಿತೀನ್ ಎಸ್. ತಂದೆ ಲೇಟ್ ಶಶಿಕುಮಾರ್, 20 ವರ್ಷ, ವಿದ್ಯಾರ್ಥಿ, 3 ಜನರ ವಾಸ ಡಿ. ಹೊಸಹಳ್ಳಿ, ಹುಲಿಯೂರುದುರ್ಗ ಅಂಚೆ-572123, ಕುಣಿಗಲ್ ತಾಲ್ಲೂಕು, ತುಮಕೂರು - ಜಿಲ್ಲೆ. ವಿರುದ್ಧ
**ಎದುರುದಾರರು :** ತಹಶೀಲ್ದಾರರು / ಜನನ ಮತ್ತು ಮರಣ ನೋಂದಣಾಧಿಕಾರಿಗಳು ದಾವಣಗೆರೆ ತಾಲ್ಲೂಕು, ದಾವಣಗೆರೆ.
**ಸಾರ್ವಜನಿಕ ಪ್ರಕಟಣೆ**
ಮೇಲ್ಕಂಡ ಅರ್ಜಿದಾರರು ಎದುರುದಾರರ ವಿರುದ್ಧ ಘನ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ ಅರ್ಜಿದಾರರ ಗಂಡ ಆಗಿದ್ದ ಲೇಟ್ ಶಶಿಕುಮಾರ್ ಹೆಚ್.ಎನ್. ತಂದೆ ಗಾರೆ ನಂಜಪ್ಪ ಇವರು ದಿನಾಂಕ 04.03.2012 ರಂದು ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ಹತ್ತಿರ ಅಪಘಾತದಲ್ಲಿ ಮರಣ ಹೊಂದಿದ್ದು, ಆ ಸಂಬಂಧ ಮರಣ ದೃಢೀಕರಣ ಪತ್ರ ಕೊಡಲು ಎದುರುದಾರರಿಗೆ ಆದೇಶಿಸಬೇಕೆಂದು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸಿರುತ್ತಾರೆ. ಸದರಿ ಮರಣ ದೃಢೀಕರಣ ಪತ್ರ ಪಡೆಯಲು ಯಾರದಾದರೂ ತಂಟೆ ತಕರಾರು ಇದ್ದಲ್ಲಿ, ಮೇಲ್ಕಂಡ ನ್ಯಾಯಾಲಯದಲ್ಲಿ ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ದಿನಾಂಕ 25.03.2024ರ ಬೆಳಗಿನ ಮಧಾಹ್ನ 11 ಗಂಟೆಗೆ ಸಲ್ಲಿಸುವುದು, ತಪ್ಪಿದ್ದಲ್ಲಿ ಪ್ರಕರಣವನ್ನು ಕಾನೂನಿನಂತೆ ಇತ್ಯರ್ಥ ಪಡಿಸಲಾಗುವುದು ಎಂದು ತಿಳಿಯುವುದು.
(ಎಂ. ಸಿದ್ದಯ್ಯ)
ಅರ್ಜಿದಾರರ ಪರ ವಕೀಲರು
ಸ್ಥಳ : ದಾವಣಗೆರೆ, ದಿನಾಂಕ : 14.02.2024
ಶಿರಸ್ತೇದಾರರು
ಘನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಸಿ.ಜೆ.ಎಂ. ನ್ಯಾಯಾಲಯ ದಾವಣಗೆರೆ.

**CHANGE OF NAME**
I, **Ashok Pandurang Jannu** residing at # 3796/26-27 Near Ring Road Circle, 3rd Main, 3rd 'G' Cross, S.S. Badavane 'B' Block, Davanagere, Karnataka has changed My name as **Ashok Panduranga Jannu** in front of Davanagere Notary on 10/02/2024. Henceforth all my documents and transactions will be in my new as undersigned.
- **ASHOK PANDURANGA JANNU**

**ಹೆಸರು ಬದಲಾವಣೆ**
ಶ್ರೀ ಮರುಳಸಿದ್ದೇಶ ಕೆ.ಎಂ. 26 ವರ್ಷ, ತಂದೆ ಕೆ.ಬಿ. ಮಂಜಪ್ಪ ಎಲೆಬೇತೂರು, ದಾವಣಗೆರೆ ತಾ||, ಜಿಲ್ಲೆ|| ವಾಸಿಯಾದ ನಾನು ನನ್ನ ಆಧಾರ್ ಕಾರ್ಡ್‌ನಲ್ಲಿ ನನ್ನ ಹೆಸರು ಮರುಳಸಿದ್ದೇಶ ಕೆ.ಎಂ. ತಂದೆ ಕೆ.ಬಿ. ಮಂಜಪ್ಪ ಎಂದು ಡಿಎಲ್‌ನಲ್ಲಿ ನನ್ನ ತಂದೆಯ ಹೆಸರು ಕೆ.ಬಿ. ಮಂಜಪ್ಪ ಎನ್ನುವುದರ ಬದಲಾಗಿ ಮಂಜುನಾಥ್ ಕೆ.ಬಿ. ಎಂದು ತಪ್ಪಾಗಿ ನಮೂದಾಗಿದೆ. ಆದ್ದರಿಂದ ದಿನಾಂಕ : 14.2.2024 ರಂದು ನೋಟರಿ ದಾವಣಗೆರೆಯವರ ಮುಂದೆ ನನ್ನ ಹೆಸರು ಶ್ರೀ ಮರುಳಸಿದ್ದೇಶ ಕೆ.ಎಂ. ಬಿನ್ ಕೆ.ಬಿ. ಮಂಜಪ್ಪ ಸರಿ ಎಂದು ಪ್ರಮಾಣ ಮಾಡಿದ್ದೇನೆ
ಸಹಿ/- ಮರುಳಸಿದ್ದೇಶ ಕೆ.ಎಂ.

**ಘನ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾವಣಗೆರೆ ಇವರ ಸನ್ನಿಧಾನದಲ್ಲಿ**
ಅಸಲು ದಾವೆ 169/2022
ವಾದಿಯರು : ಬಿ.ಜಿ. ಶಾಂತವೀರಪ್ಪ ಹಾಗೂ ಇತರರು ವಿರುದ್ಧ- ಪ್ರತಿವಾದಿಯರು : ಶ್ರೀಮತಿ ಬಿ.ಜಿ. ಕಾಂತಮ್ಮ ಹಾಗೂ ಇತರರು, ಎರಡನೇ ಪ್ರತಿವಾದಿ : ಶ್ರೀಮತಿ ಸುಮಂಗಳ ಕೋಂ. ವಯಸ್ಸು 63 ವರ್ಷಗಳು, ಮನೆಕೆಲಸ, ಬಾಡ ಗ್ರಾಮ, ದಾವಣಗೆರೆ ತಾಲ್ಲೂಕು.
**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5, ನಿಯಮ 20 (1-ಎ) ರಡಿಯಲ್ಲಿ 2ನೇ ಎದುರುದಾರರಿಗೆ ಹೊರಡಿಸಲಾದ ಪತ್ರಿಕಾ ನೋಟೀಸು ಏನೆಂದರೆ.**
ದಾವಣಗೆರೆ ತಾಲ್ಲೂಕು, ಬೇತೂರು ಗ್ರಾಮದ ವಾಸಿಗಳಾದ ಬಿ.ಜಿ. ಶಾಂತವೀರಪ್ಪ ಬಿನ್ ಸಿದ್ದಪ್ಪ 2. ಜಿ.ಎಸ್. ಬಸವರಾಜ ಬಿನ್ ಗೌಡರ ಶರಣಪ್ಪ, 3. ಬಿ.ಜಿ. ಸಂಗನಗೌಡ್ರು ಬಿನ್ ಶಂಕರಪ್ಪ. 4. ಬಸವರಾಜ್ ಜಿ.ಸಿ. ಬಿನ್ ಚನ್ನಬಸಪ್ಪ, 5 ಜಿ.ಎನ್. ಪ್ರಭು ಬಿನ್ ನಾಗಪ್ಪ, 6. ಬಿ.ಜಿ. ರವಿಕುಮಾರ್ ಬಿನ್ ಶರಣಪ್ಪ, ದಾವಣಗೆರೆಯಲ್ಲಿ ವಾಸವಾಗಿರುವ 7. ಜಿ.ಆರ್. ಗುರುಮೂರ್ತಿ ಬಿನ್ ರಾಜಶೇಖರಪ್ಪ, ಬೇತೂರು ವಾಸಿಗಳಾದ 8. ಬಿ.ಜಿ. ಚನ್ನಪ್ಪ ಬಿನ್ ಷಡಕಪ್ಪ, 9. ಬಿ.ಜಿ. ಶಿವಕುಮಾರ್ ಬಿನ್ ಷಡಕಪ್ಪ, 10. ಬಿ.ಜಿ. ಸತೀಶ್ ಬಿನ್ ಬಿ.ಜಿ. ಪ್ರಕಾಶ್ ಇವರು ಬಿ.ಜಿ. ಕಾಂತಮ್ಮ ಮತ್ತು ಇತರರು ಹಾಗೂ ತಮ್ಮ ವಿರುದ್ಧ ದಾವಣಗೆರೆಯ ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯದಲ್ಲಿ ಓ.ಎಸ್. 169/2022 ರಲ್ಲಿ ಬೇತೂರು ಗ್ರಾಮದ ಖಾನೇ ಷುಮಾರಿ ನಂ. 383ರ ಆಸ್ತಿಗೆ ಸಂಬಂಧಿಸಿದಂತೆ ಮಾಲೀಕತ್ವ ಘೋಷಣೆ ಹಾಗೂ ಇತರೆ ಪರಿಹಾರಗಳನ್ನು ಕೋರಿ ಸಲ್ಲಿಸಿರುತ್ತಾರೆ. 2ನೇ ಪ್ರತಿವಾದಿಯಾದ ತಮಗೆ ಮೇಲ್ಕಂಡ ಪ್ರಕರಣದಲ್ಲಿ ನ್ಯಾಯಾಲಯದ ಮುಂದೆ ಹಾಜರಾಗಲು ನ್ಯಾಯಾಲಯದಿಂದ ಸಮನ್ಸ್ ಹಾಗೂ ನೋಂದಾಯಿತ ಅಂಚೆ ಮೂಲಕ ಸಮನ್ಸನ್ನು ಹೊರಡಿಸಿದ್ದು, ಅದು ತಮಗೆ ಜಾರಿಯಾಗದೇ ವಾಪಾಸ್ಸಾಗಿರುತ್ತದೆ. ಹೀಗಾಗಿ ಅರ್ಜಿದಾರರು ಪತ್ರಿಕಾ ಪ್ರಕಟಣೆ ಮೂಲಕ ಸಮನ್ಸನ್ನು ಹೊರಡಿಸಲು ಕೋರಿಕೊಂಡ ಕಾರಣವಾಗಿ ತಮಗೆ ಈ ಪತ್ರಿಕಾ ಪ್ರಕಟಣೆ ಮೂಲಕ ಸಮನ್ಸನ್ನು ಹೊರಡಿಸಲಾಗಿದೆ. ಪ್ರಕರಣದ ಮುದ್ದತ್ತನ್ನು ದಿನಾಂಕ : 16.3.2024 ರಂದು, ತಮ್ಮಯ ಹಾಜರಾತಿಗಾಗಿ ನಿಗದಿಪಡಿಸಿದ್ದು ಇರುತ್ತದೆ. ಆ ದಿನ ತಾವು ಬೆಳಿಗ್ಗೆ 11 ಘಂಟೆಗೆ ಖುದ್ದಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ನ್ಯಾಯಾಲಯದ ಮುಂದೆ ಮೇಲ್ಕಂಡ ಪ್ರಕರಣದಲ್ಲಿ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ, ತಮ್ಮ ಗೈರು ಹಾಜರಿಯಲ್ಲಿ ಪ್ರಕರಣವನ್ನು ತೀರ್ಮಾನಿಸಲಾಗುವುದು. ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ : 9.2.2024ರಂದು ನೀಡಲಾಗಿದೆ.
ಸಹಿ/- ಬಿ.ಎಂ. ಬಸವನಗೌಡ
ಕೆ.ದಾದಾಪೀರ್
ವಾದಿಯರ ಪರ ವಕೀಲರು, ದಾವಣಗೆರೆ.
ಘನ ನ್ಯಾಯಾಲಯದ ಆದೇಶಾನುಸಾರ,
ಸಹಿ/- ಮುಖ್ಯ ಲಿಪಿಕಾಧಿಕಾರಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ದಾವಣಗೆರೆ.

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ. 20x45 ಪೂರ್ವ 18 ಲಕ್ಷ, 20x30 ಪಶ್ಚಿಮ 11 ಲಕ್ಷ
ಮೊ : 9740258276
ಬ್ಯಾಂಕ್ ಲೋನ್ ಆಗುತ್ತದೆ.

**ಬೇಕಾಗಿದ್ದಾರೆ**
ನಗರದ ಪ್ರತಿಷ್ಠಿತ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಆಸಕ್ತ ಯುವಕರು ಬೇಕಾಗಿದ್ದಾರೆ ( ಸೇಲ್ಸ್ ಬಾಯ್ಸ್, ಸೇಲ್ಸ್ ಮ್ಯಾನೇಜರ್, ಆಫೀಸ್ ಬಾಯ್) ಉತ್ತಮ ವೇತನ ಕೊಡಲಾಗುವುದು.
90191 69123

**ಸೈಟು ಮಾರಾಟಕ್ಕಿದೆ**
KHB ದಾವಣಗೆರೆಯಲ್ಲಿ 50x80 ಪಶ್ಚಿಮ, ಈ ಸೈಟು ಬನ್ನಿಕೋಡ್ ರೋಡ್‌ಗೆ ತುಂಬಾ ಹತ್ತಿರವಿದ್ದು, ಮನೆ ಕಟ್ಟಲು ಅಥವಾ ಇನ್ವೆಸ್ಟ್‌ಮೆಂಟ್‌ಗೆ ತುಂಬಾ ಚೆನ್ನಾಗಿದೆ. ಸೈಟ್ ಓನರ್‌ಗೆ ಸಂಪರ್ಕಿಸಿ
63621 81509

**ಮನೆ ಲೀಸ್‌ಗೆ ಇದೆ**
SS ಬಡಾವಣೆಯ 'B' ಬ್ಲಾಕ್, 4th ಮೇನ್ ರೋಡ್, ಮೊದಲನೇ ಮಹಡಿಯಲ್ಲಿ ಡಬ್ಬಲ್ ಬೆಡ್ ರೂಮ್ ಹಾಗೂ ಬಾಲ್ಕನಿ, ಅಟ್ಯಾಚ್ ಬಾತ್ ರೂಮ್ ಇರುವ ಮನೆಯು ಲೀಸ್‌ಗೆ ಇದೆ. ವಿಚಾರಿಸಿ :
97425 37448

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ ಕೊಡಲಾಗುವುದು. ಬೈಕ್‌ವುಳ್ಳವರಿಗೆ ಮೊದಲನೇ ಆದ್ಯತೆ.
9482389317, 6363403567

**ಬೇಕಾಗಿದ್ದಾರೆ**
ದಾವಣಗೆರೆ ಹೆಸರಾಂತ ಜ್ಯೂಯಲರಿ ಶೋರೂಂನಲ್ಲಿ ಕೆಲಸ ಮಾಡಲು ಅನುಭವವುಳ್ಳ ಯುವಕ/ಯುವತಿಯರು ಬೇಕಾಗಿದ್ದಾರೆ. **ಸಂಪರ್ಕಿಸಿ:**
ರವಿ ಜ್ಯೂಯಲರ್ಸ್,
ಮಂಡಿಪೇಟೆ, ದಾವಣಗೆರೆ
ಮೊ: 99649 32113

**WANTED**
Banking Sector Job Openings (Female Only)
Qualification : Any Degree.
90715 55081
Interview Time - 11AM

**ದುರ್ಗಾ ಪರಮೇಶ್ವರಿ ಸರ್ವೀಸ್ ಸೆಂಟರ್**
1) ಗಾರೆ ಕೆಲಸ 2) ಹೊಸ ಪೇಟಿಂಗ್ / ಹಳೇ ಪೇಟಿಂಗ್ 3) ಎಲೆಕ್ಟ್ರೀಷಿಯನ್ 4) ಕಾರ್ಪೆಂಟರ್ 5) ಟೈಲ್ಸ್ ಮತ್ತು ಬಾತ್ ರೂಮ್ ಆಫೀಸ್ ವರ್ಕ್ 6) ಸಂಪ್ ಕ್ಲೀನಿಂಗ್ 7) ಹೌಸ್ ಕ್ಲೀನಿಂಗ್ . ನಿಮ್ಮ ಮನೆಯ ಸಣ್ಣ-ಪುಟ್ಟ ಕೆಲಸ ಮಾಡಿ ಕೊಡುತ್ತೇವೆ. ಕಡಿಮೆ ದರದಲ್ಲಿ ಮಾಡಿಕೊಡುತ್ತೇವೆ.
73535 07622

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ, ದಂಪತಿ ಬೇಕಾಗಿದ್ದಾರೆ. ಸಂಬಳ 20,000/- ಊಟ+ವಸತಿ ಉಚಿತ.
97400 98047

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ : M/s **ಬಸವಶ್ರೀ ಸೋಲಾರ್ ಟೆಕ್ನಾಲಜೀಸ್**, ನಂ. 43 ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
ಮೊ.99001 42052
ಸಮಯ : 1 PM to 5 PM

**ಹುಡುಗರು ಬೇಕಾಗಿದ್ದಾರೆ**
ಸಿಸಿಟಿವಿ ಕೆಲಸಕ್ಕೆ ಅನುಭವವುಳ್ಳ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ.
ವಯೋಮಿತಿ : 20-30 ವರ್ಷ.
93805 83672
ದಾವಣಗೆರೆ

**ಹೋಟೆಲ್ ಕೆಲಸಕ್ಕೆ**
ಅನುಭವವುಳ್ಳ ದೋಸೆ ಭಟ್ಟರು, ಟೀ-ಕಾಫಿ ಮಾಡುವವರು, ಸಪ್ಲೈಯರ್‌ಗಳು, ಕೌಂಟರ್ ಹುಡುಗರು, ಕ್ಲೀನರ್ ಗಳು, ಚಾಟ್ಸ್ ಮಾಡುವವರು, ಹೆಲ್ಪರ್ ಗಳು ಬೇಕಾಗಿದ್ದಾರೆ.
95350 35660, 63646 64518

**ಸೇಲ್ಸ್ & ಮಾರ್ಕೆಟಿಂಗ್**
ಸೇಲ್ಸ್ & ಮಾರ್ಕೆಟಿಂಗ್ ಕೆಲಸ ಮಾಡಲು ಪುರುಷರು ಬೇಕಾಗಿದ್ದಾರೆ.
ವಯೋಮಿತಿ-20 ರಿಂದ 30 ವರ್ಷ ಒಳಗೆ
ಸುವೀ ಇಂಡಸ್ಟ್ರೀಸ್
ಕರೂರು ಇಂಡಸ್ಟ್ರೀಯಲ್ ಏರಿಯಾ, ದಾವಣಗೆರೆ.
96206 38679

**ಬೇಕಾಗಿದ್ದಾರೆ**
ಫರ್ನಿಚರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ 21 ರಿಂದ 30 ವರ್ಷ, ಸ್ಥಳ : ದಾವಣಗೆರೆ.
86182 60719

**ವಾಟರ್ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ. ಅನುಭವ ಉಳ್ಳವರಿಗೆ ಅವಕಾಶವಿದ್ದು,14 ಸಾವಿರ ರೂ. ವೇತನ ಹಾಗೂ ಇನ್ಸೆಂಟಿವ್ ನೀಡಲಾಗುವುದು. ಆಸಕ್ತರು ಸಂಪರ್ಕಿಸಿ :
ಶ್ರೀ ವಾಸವಿ ಮೆಡಿಕಲ್ ಎಂಪೋರಿಯಮ್
ಪಿ.ಜೆ.ಬಡಾವಣೆ,ದಾವಣಗೆರೆ.
94488 31396

**WANTED**
Technician & Account Executive
Any Degree Male Candidate (Below 30 age)
VANI HONDA
P.B. ROAD, DAVANDEGERE.

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬೇಕಾಗಿದ್ದಾರೆ**
ಪೇಂಟ್ ಅಂಗಡಿಯಲ್ಲಿ ಕೆಲಸಕ್ಕೆ 20 ರಿಂದ 35 ವಯಸ್ಸಿನ ಹುಡುಗರು ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ : SSLC, PUC, ಆದವರಿಗೆ
80731 81729

**WANTED**
Audit assistants 4 posts Female,
Qual : B.Com pass or Fail with computer knowledge, Walk in interview on 15.02.2024 & 16.02.2024 at 10am to 6pm
Fayaz Ahammed & Associates
Auditors & Tax consultant Room no- 11&12
Muslim Hostel Shoping Complex Ambedkar circle, Davanagere.
94480 45778

**CHANGE OF NAME**
RAJKUMAR JAYASHEELAPPA (old name) S/o JAYASHEELAPPA Resident of # 104/ Bethel Villa, Guddada camp, Halebathi-577 566. Davangere Dist, Karnataka has changed my name as RAJKUMAR vide affidavit dated 14.02.2024 sworn before Notary I.P Brahmakumar, Davangere, Henceforth all my transactions and dealings will be in my new name RAJKUMAR
Sd/- RAJKUMAR

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ದರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
SSLC ನೇರ ಪರೀಕ್ಷೆ
IInd PUC/Senior Secondary, Arts/Commerce/Science
B.Sc.-Agriculture, B.Tech All branches, D.Pharma, B.Ed., PhD regular
B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ನಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

1974 2023

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಗುರುವಾರ, ಫೆಬ್ರವರಿ 15, 2024

☎ 08192 254736 91642 99999

## ಲೋಕಸಭಾ ಚುನಾವಣೆ: ಮಾರ್ಚ್ ಮೊದಲ ವಾರವೇ ಕಾಂಗ್ರೆಸ್ ಪಟ್ಟಿ

ಬೆಂಗಳೂರು, ಫೆ. 14- ಮುಂಬರುವ ಲೋಕಸಭಾ ಚುನಾವಣೆಗೆ ರಾಜ್ಯದ 28 ಕ್ಷೇತ್ರಗಳ ಅಭ್ಯರ್ಥಿಗಳನ್ನು ಮಾರ್ಚ್ ಮೊದಲ ವಾರದಲ್ಲೇ ಪ್ರಕಟಿಸಲು ಕಾಂಗ್ರೆಸ್ ತೀರ್ಮಾನಿಸಿದೆ.

ಕನಿಷ್ಠ 25 ಕ್ಷೇತ್ರಗಳನ್ನು ಗೆಲ್ಲಲೇಬೇಕೆಂದು ಗುರಿ ಇಟ್ಟುಕೊಂಡಿರುವ ಕೆಪಿಸಿಸಿ ಚುನಾವಣಾ ಕಣಕ್ಕೆ ಕೆಲವು ಸಚಿವರು, ಶಾಸಕರು ಹಾಗೂ ವರ್ಚಸ್ವಿ ನಾಯಕರನ್ನು ಕಣಕ್ಕಿಳಿಸುವ ಬಗ್ಗೆ ಇಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ಪ್ರಸ್ತಾಪವಾಗಿ ಕೆಲವು ಕ್ಷೇತ್ರಗಳಿಗೆ ಸಂಭವನೀಯರ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

**ಸುಮಾರು 10 ಕ್ಷೇತ್ರಗಳಲ್ಲಿ ಸಮರ್ಥ ಅಭ್ಯರ್ಥಿಗಳೇ ದೊರಕದಿರುವುದು ಪಕ್ಷಕ್ಕೆ ತಲೆನೋವಾಗಿದ್ದು, ಇಲ್ಲಿಯ ಅಭ್ಯರ್ಥಿಗಳ ಆಯ್ಕೆಯನ್ನು ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರಿಗೆ ಬಿಡಲಾಗಿದೆ.**

ಆದರೆ, ಅಭ್ಯರ್ಥಿಗಳ ಆಯ್ಕೆ ಸಂಬಂಧ ಜಿಲ್ಲಾ ಘಟಕ, ಪ್ರತಿ ಕ್ಷೇತ್ರಕ್ಕೆ ನೇಮಕಗೊಂಡಿದ್ದ ಉಸ್ತುವಾರಿ ಸಚಿವರು ನೀಡಿರುವ ವರದಿ ಹಾಗೂ ಚುನಾವಣಾ ಪೂರ್ವ ಸಮೀಕ್ಷೆ ನೀಡಿರುವ ವರದಿಗೆ ಬಹಳಷ್ಟು ಕ್ಷೇತ್ರಗಳಲ್ಲಿ ತಾಳೆ ಆಗದ ಕಾರಣ ಮತ್ತೆ ಸಮೀಕ್ಷೆ ನಡೆಸಿ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಇಂದು ಸೇರಿದ ಸಭೆ ನಿರ್ಧರಿಸಿದೆ.

ಅಭ್ಯರ್ಥಿಗಳ ಆಯ್ಕೆ ಸಂಬಂಧ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಪಟ್ಟಿ ಪರಿಷ್ಕರಣೆ ಸಮಿತಿ ಅಧ್ಯಕ್ಷ ಹರೀಶ್ ಚೌಧರಿ, ರೋಜಿ ಜಾನ್, ಅಭಿಷೇಕ್ ದತ್, ಮಯೂರ ಜಯಕುಮಾರ್, ಜಿಗ್ನೇಶ್ ಮೇವಾನಿ, ಡಾ. ವಿಶ್ವಜಿತ್ ಕದಂ ಅವರನ್ನು ಒಳಗೊಂಡ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಪರಿಷ್ಕರಣಾ ಪಟ್ಟಿ ಸಮಿತಿಯು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಂದ ಎಲ್ಲಾ 28 ಕ್ಷೇತ್ರಗಳ ಬಗ್ಗೆಯೂ ಮಾಹಿತಿ ಪಡೆದು ಪ್ರತಿ ಕ್ಷೇತ್ರದ ಬಗ್ಗೆಯೂ ಸುದೀರ್ಘ ಚರ್ಚೆ ನಡೆಸಿತು. ರಾಷ್ಟ್ರದ 543 (4ನೇ ಪುಟಕ್ಕೆ)

### ಮತ್ತೊಂದು ಸುತ್ತಿನ ಸಮೀಕ್ಷೆ: ಡಿಕೆಶಿ

ಬೆಂಗಳೂರು, ಫೆ. 14- ಲೋಕಸಭೆ ಚುನಾವಣೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಮತ್ತೊಂದು ಸುತ್ತಿನ ಸಮೀಕ್ಷೆ ನಡೆಸಿ, ದೆಹಲಿಯಲ್ಲಿ ಸಭೆ ಮಾಡಲಿದ್ದೇವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ಚುನಾವಣೆ ಸಮಿತಿ ಸಭೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಂದಿನ ಸಭೆಯಲ್ಲಿ ಪಕ್ಷದ ವೀಕ್ಷಕರು, ಜಿಲ್ಲಾ ಮಂತ್ರಿಗಳು, ಕೆಲವು ಕಾರ್ಯಕರ್ತರು ಸಲ್ಲಿಸಿದ್ದ ವರದಿ ಹಾಗೂ ನಮ್ಮ ಸಮೀಕ್ಷೆ ವರದಿಗಳನ್ನು ಪರಾಮರ್ಶೆ ಮಾಡಿದ್ದೇವೆ, ಮತ್ತೊಂದು ಸುತ್ತಿನ ಸಮೀಕ್ಷೆ ಮೂಲಕ ಅಭಿಪ್ರಾಯ ಸಂಗ್ರಹಕ್ಕೆ ಸೂಚಿಸಿದ್ದೇವೆ, ಪಕ್ಷದ ಅಭ್ಯರ್ಥಿಗಳ ಪಟ್ಟಿ ಇನ್ನೂ ಅಂತಿಮ ವಾಗಿಲ್ಲ, ಮುಂದಿನ ಸುತ್ತಿನ ಸಭೆ ಯನ್ನು ದೆಹಲಿಯಲ್ಲಿ ನಡೆಸಲಾಗುವುದು, ಬಜೆಟ್ ಅಧಿವೇಶನದ ಹಿನ್ನೆಲೆಯಲ್ಲಿ ಈ ಬಾರಿ ಬೆಂಗಳೂರಿನಲ್ಲೇ ಸಭೆ ಮಾಡಲಾಗಿದೆ ಎಂದರು.

ಅಭ್ಯರ್ಥಿಗಳ ಪಟ್ಟಿ ಆದಷ್ಟು ಬೇಗ ಅಂತಿಮಗೊಳಿಸಬೇಕು, ಶೇ.50 ರಷ್ಟು ಅಭ್ಯರ್ಥಿಗಳಿಗಾದರೂ ಕೆಲಸ ಆರಂಭಿಸಲು (4ನೇ ಪುಟಕ್ಕೆ)

## ಲಂಬಾಣಿ ಜನಾಂಗದ ಅಭಿವೃದ್ಧಿಗೆ ಸರ್ಕಾರ ಬದ್ಧ

### ಸಂತ ಸೇವಾಲಾಲ್ 285ನೇ ಜಯಂತಿ ಕಾರ್ಯಕ್ರಮದಲ್ಲಿ ಸಚಿವ ಮಧು ಬಂಗಾರಪ್ಪ



ನ್ಯಾಮತಿ, ಫೆ.14- ರಾಜ್ಯದಲ್ಲಿರುವ ಲಂಬಾಣಿ ಜನಾಂಗ ವಿಶಿಷ್ಟ ಸಂಸ್ಕೃತಿ ಹೊಂದಿದೆ. ಈ ಜನರ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದು ಶಾಲಾ ಶಿಕ್ಷಣ, ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಅವರು ಬುಧವಾರ ನ್ಯಾಮತಿ ತಾಲ್ಲೂಕಿನ ಭಾಯಾಘಡ್-ಸೂರಗೊಂಡನಕೊಪ್ಪದಲ್ಲಿ ಸಮಾಜ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಆಡಳಿತ, ತಾಂಡಾ ಅಭಿವೃದ್ದಿ ನಿಗಮ, ಸಂತ ಸೇವಾಲಾಲ್ ಕ್ಷೇತ್ರ ಅಭಿವೃದ್ದಿ ಮತ್ತು ನಿರ್ವಹಣಾ ಪ್ರತಿಷ್ಠಾನ, ಸಂತ ಸೇವಾಲಾಲ್ ಜನ್ಮ ಸ್ಥಾನ ಮಹಾಮಠ ಸಮಿತಿ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾದ ಸಂತ ಸೇವಾಲಾಲ್ ಮಹಾರಾಜರ 285ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಸಂತ ಸೇವಾಲಾಲರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಸಂತ ಸೇವಾಲಾಲ್ ರವರು 17, 18ನೇ ಶತಮಾನದಲ್ಲಿ ಅಹಿಂಸಾ ತತ್ವ, ಶಾಂತಿ ಸಂಕೇತವನ್ನು ಪ್ರತಿಪಾದಿಸಿದವರು. ಅಲೆಮಾರಿಯಾಗಿದ್ದ ಈ ಜನರು ನೆಲೆಗೊಂಡು ಸಾಂಸ್ಕೃತಿಕ ಮತ್ತು ಆರ್ಥಿಕ ಮುನ್ನಡೆಯಲ್ಲಿ ಸಂತ ಸೇವಾಲಾಲ್ ರವರ ಪಾತ್ರ ಪ್ರಮುಖವಾಗಿದೆ.

ಬಂಜಾರ ಸಾಂಪ್ರದಾಯಿಕತೆ, ಮೌಖಿಕ ಸಾಹಿತ್ಯ, ವೇಷಭೂಷಣ, ಕಲೆ ಸಂರಕ್ಷಣೆ ಮಾಡಲು ಸರ್ಕಾರ ಬದ್ಧವಾಗಿದೆ. ಈ ಜನಾಂಗದ ಸಂಘಟನೆಯಲ್ಲಿ ಪ್ರಮುಖವಾಗಿರುವ ಸೇವಾಲಾಲರು ಸೂರಗೊಂಡನಕೊಪ್ಪದಲ್ಲಿ ಹುಟ್ಟಿರುವುದು ಪುಣ್ಯಭೂಮಿಯಾಗಿದೆ ಎಂದರು.

ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಯವರು ಭಾಗವಹಿಸಬೇಕಿತ್ತು, ಕಾರಣಾಂತರದಿಂದ ಬರಲು ಸಾಧ್ಯವಾಗಿಲ್ಲ. ಆದ್ದರಿಂದ ತಮ್ಮ ಸಂದೇಶದಲ್ಲಿ ರಾಜ್ಯ ಸರ್ಕಾರ ಲಂಬಾಣಿ ಜನಾಂಗದ ಸರ್ವಾಂಗೀಣ ಅಭಿವೃದ್ದಿಗೆ ಎಲ್ಲಾ ಕ್ರಮ ಕೈಗೊಳ್ಳಲಿದ್ದು, ನಿಮ್ಮ ಜೊತೆ ಇರಲಿದೆ ಎಂದರು.

ಸೂರಗೊಂಡನಕೊಪ್ಪದಲ್ಲಿ ಶಾಲಾ-ಕಾಲೇಜು ಸ್ಥಾಪನೆ, ಇಲ್ಲಿಗೆ ಸಂಪರ್ಕಿಸುವ ರಸ್ತೆ ಅಭಿವೃದ್ಧಿಗೆ ನಿಮ್ಮ ಪರವಾಗಿ ಸರ್ಕಾರದ ಮಟ್ಟದಲ್ಲಿ ಧ್ವನಿ ಎತ್ತುವೆ ಎಂದರು. ಮಾಜಿ ಮುಖ್ಯಮಂತ್ರಿ ಬಂಗಾರಪ್ಪನವರಿಗೆ ಲಂಬಾಣಿ ಜನಾಂಗದೊಂದಿಗೆ ನಿಕಟ ಸಂಪರ್ಕವಿತ್ತು ಮತ್ತು ಈ ಜನರ ಅಭಿವೃದ್ದಿಗೆ, ಬಡತನ ನಿವಾರಣೆಗೆ ಅವರಲ್ಲಿ ತುಡಿತವಿತ್ತು ಎಂದರು.

ವಿಧಾನಸಭಾ ಉಪ ಸಭಾಪತಿ ಹಾಗೂ ಸಂತ ಸೇವಾಲಾಲ್ ಜನ್ಮಸ್ಥಾನ ಮಹಾಮಠ ಸಮಿತಿ ಅಧ್ಯಕ್ಷ ರುದ್ರಪ್ಪ ಮಾನಪ್ಪ ಲಮಾಣಿ ಪ್ರಾಸ್ತಾವಿಕವಾಗಿ ಮಾತನಾಡಿ, 1985ರಲ್ಲಿ ಸಮಾಜದ ಗಣ್ಯರು ಸೇರಿ ಕ್ಷೇತ್ರದ ಅಭಿವೃದ್ದಿಗೆ ಅಡಿಗಲ್ಲು ಹಾಕುತ್ತಾರೆ. ಸರ್ಕಾರ ಮೊಟ್ಟ ಮೊದಲು ರೂ.1 ಕೋಟಿ ಅನುದಾನ ನೀಡಿತು. 2013ರ ನಂತರ ಸರ್ಕಾರ ಈ ಕ್ಷೇತ್ರದ ಅಭಿವೃದ್ದಿಗಾಗಿ 60 ಕೋಟಿಗೂ ಹೆಚ್ಚಿನ ಅನುದಾನ ನೀಡಿತು.

ಮುಂದಿನ ದಿನಗಳಲ್ಲಿ ಸಮಾಜದ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ರೂ. 50 ಕೋಟಿವರೆಗಿನ ವೆಚ್ಚದಲ್ಲಿ ವಸತಿ ಶಾಲೆ ನಿರ್ಮಾಣ ಮಾಡುವ ಯೋಜನೆ ಇದ್ದು ಇದಕ್ಕಾಗಿ 15 ಎಕರೆ ಜಾಗ ಮಂಜೂರು ಮಾಡಲಾಗಿದೆ. ಧಾರ್ಮಿಕ ಸಂಸ್ಥೆಯ ಜೊತೆಗೆ ಕೌಶಲ್ಯಾಭಿವೃದ್ಧಿಗಾಗಿ ಸರ್ಕಾರಿ ಐಟಿಐ ಕಾಲೇಜು ಆರಂಭಿಸಲು ಕಟ್ಟಡ ನಿರ್ಮಾಣ ಕಾಮಗಾರಿ ನಡೆಯುತ್ತಿದೆ ಎಂದರು.

ಪ್ರತಿಷ್ಠಾನದ ಮೂಲಕ ನೀಡಿದ 10 ಕೋಟಿಯಲ್ಲಿ ಗೋಶಾಲೆ, ಸೌರ ವಿದ್ಯುತ್ ಉತ್ಪಾದನೆ ಮಾಡುವ ಕೆಲಸ ನಡೆಯುತ್ತಿದೆ. ಇಲ್ಲಿ ಸಪ್ತಮಾತೃಕಿಯರ ಕೊಳದ (4ನೇ ಪುಟಕ್ಕೆ)

## ವಾಣಿಜ್ಯ ಉಪಯೋಗಿ ಸಂಸ್ಥೆಗಳಿಗೆ ಸಮ್ಮತಿ ಪತ್ರ ಕಡ್ಡಾಯ

ದಾವಣಗೆರೆ, ಫೆ.14- ಜಿಲ್ಲೆಯ ಕೈಗಾರಿಕೆಗಳು, ಉದ್ದಿಮೆ ಘಟಕಗಳು, ಆಸ್ಪತ್ರೆಗಳು, ಕ್ಲಿನಿಕ್‌ಗಳು, ಸಾಮಿಲ್‌ಗಳು, ವಾಣಿಜ್ಯ ಉಪಯೋಗಿ ಕಾರ್ಯ ನಿರ್ವಹಿಸುತ್ತಿರುವ ಸಂಸ್ಥೆಗಳು, ಸಮುದಾಯ ಭವನಗಳು, ಕಲ್ಯಾಣ ಮಂಟಪಗಳು, ಅಪಾರ್ಟ್ ಮೆಂಟ್‌ಗಳು ನಿಯಮಾನುಸಾರ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸ್ಥಾಪನಾ ಸಮ್ಮತಿ ಮತ್ತು ಚಾಲನಾ ಸಮ್ಮತಿ ಪತ್ರ ಪಡೆಯುವುದು ಕಡ್ಡಾಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮಂಡಳಿಯಿಂದ ಸ್ಥಾಪನಾ ಸಮ್ಮತಿ ಪತ್ರ ಮತ್ತು ಚಾಲನಾ ಸಮ್ಮತಿ ಪತ್ರ ಪಡೆದು ನವೀಕರಿಸಿಕೊಳ್ಳದೇ ಇರುವಂತಹ ಹಾಗೂ ಸಮ್ಮತಿ ಪತ್ರ ಪಡೆಯದೇ ಕಾರ್ಯನಿರ್ವಹಿಸುತ್ತಿರುವ ಮಂಡಳಿಯವರು ಸಮ್ಮತಿ ಪತ್ರ ಪಡೆದು ಕಾರ್ಯನಿರ್ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ. ತಪ್ಪಿದ್ದಲ್ಲಿ ಮಂಡಳಿ ಕಾನೂನು ರೀತ್ಯಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಪ್ರಾದೇಶಿಕ ಕಚೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಸಂಪರ್ಕಿಸಲು ಮಂಡಳಿಯ ಪರಿಸರ ಅಧಿಕಾರಿ ತಿಳಿಸಿದ್ದಾರೆ.

## ಪಾಲಿಕೆಯಲ್ಲಿ ಗುಂಡು ತಗುಲಿ ಪೇದೆಯ ಆರೋಗ್ಯ ಸ್ಥಿತಿ ಗಂಭೀರ

ದಾವಣಗೆರೆ, ಫೆ. 14- ಮಹಾನಗರ ಪಾಲಿಕೆಯಲ್ಲಿ ಇವಿಎಂ ಗಾರ್ಡ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಪೇದೆಗೆ ಗುಂಡು ತಗುಲಿ ಗಾಯಗೊಂಡಿರುವ ಘಟನೆ ಇಂದು ರಾತ್ರಿ 8.15 ರಿಂದ 8.30ರ ಸಮಯದಲ್ಲಿ ನಡೆದಿದೆ.

ಡಿಎಆರ್ 2011ರ ಬ್ಯಾಚ್‌ನ ಕಾನ್ಸ್‌ಟೇಬಲ್ ಗುರುಮೂರ್ತಿಗೆ ಗುಂಡು ತಗುಲಿದ್ದು, ಇದು ಆಕಸ್ಮಿಕವೋ ಅಥವಾ ಆತ್ಮಹತ್ಯೆಗೆ ಯತ್ನವೋ ಎಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಗುರುಮೂರ್ತಿ ಅವರ ಬಂದೂಕಿ ನಿಂದ ಗುಂಡು ಹಾರಿದ್ದು, ಕೂಡಲೇ ಅಲ್ಲಿದ್ದವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎನ್ನಲಾಗಿದೆ. (2ನೇ ಪುಟಕ್ಕೆ)

## ಬಿಜೆಪಿ ಶಾಸಕನಿಗೆ ಪ್ರಾಣ ಬೆದರಿಕೆ ಕಾಂಗ್ರೆಸ್‌ನ ಪದ್ಮರಾಜ್ ಬಂಧನ





ಬೆಂಗಳೂರು, ಫೆ. 14- ಮಾಜಿ ಸಚಿವ, ಹಾಲಿ ಬಿಜೆಪಿ ಶಾಸಕ ಕೆ.ಗೋಪಾಲಯ್ಯ ಅವರಿಗೆ ಪ್ರಾಣ ಬೆದರಿಕೆ ಹಾಕಿದ ಕಾಂಗ್ರೆಸ್ ಮುಖಂಡ ಹಾಗೂ ಬಿಬಿಎಂಪಿ ಮಾಜಿ ಸದಸ್ಯ ಪದ್ಮರಾಜ್ ಅವರನ್ನು ಬಂಧಿಸಲಾಗಿದೆ.

ವಿಧಾನಸಭೆಯಲ್ಲಿಂದು ಶೂನ್ಯ ವೇಳೆಯಲ್ಲಿ, ತಮಗೆ ಪ್ರಾಣ ಬೆದರಿಕೆ ಇದ್ದು, ರಕ್ಷಣೆ ನೀಡಬೇಕು, ಕ್ಷೇತ್ರದ ಕಾಂಗ್ರೆಸ್ ಮುಖಂಡರೊಬ್ಬರು ತಮ್ಮನ್ನು ನಿಂದಿಸಿ ಕೊಲ್ಲುವುದಾಗಿ ಬೆದರಿಸಿದ್ದಾರೆ ಎಂದು ದೂರಿದರು.

ಸದಸ್ಯರ ಪ್ರಸ್ತಾವ ಮತ್ತು ವಿವರಣೆ ಕೇಳುತ್ತಿದ್ದಂತೆ ಸಭಾಧ್ಯಕ್ಷ ಯು.ಟಿ. ಖಾದರ್, ಸದನದ ಸದಸ್ಯರನ್ನು ನಿಂದಿಸಿ ಕೊಲೆ ಬೆದರಿಕೆ ಹಾಕಿದವರನ್ನು ಸಂಜೆ ವೇಳೆಗೆ ಬಂಧಿಸಬೇಕು. ಇಲ್ಲದಿದ್ದರೆ, ದೂರು ದಾಖಲು ಮಾಡಿಕೊಂಡಿರುವ ಠಾಣೆಯ ಅಧಿಕಾರಿಯನ್ನು ಅಮಾನತ್ತು ಮಾಡುವಂತೆ ಕಟು ಆದೇಶ ಮಾಡಿದರು.

ವಿಧಾನಸಭೆಯ ನಡಾವಳಿ ಗೃಹ ಇಲಾಖೆಗೆ ತಲುಪುತ್ತಿದ್ದಂತೆ ಎಚ್ಚೆತ್ತ ಪೊಲೀಸರು, ಅಡವಿಕೊಂಡಿದ್ದ ಆರೋಪಿ ಪದ್ಮರಾಜ್ ಮನೆ ಬಾಗಿಲು ಒಡೆದು, ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.

ಸದನದಲ್ಲಿ ಪ್ರಶ್ನೋತ್ತರದ ಬಳಿಕ ಶೂನ್ಯ ವೇಳೆಯಲ್ಲಿ ಗೋಪಾಲಯ್ಯ ಅವರು ವಿಷಯ ಪ್ರಸ್ತಾಪಿಸಿ, ನಿನ್ನೆ ರಾತ್ರಿ 11 ಗಂಟೆ 1 ನಿಮಿಷಕ್ಕೆ ಬಿಬಿಎಂಪಿಯ ಮಾಜಿ ಸದಸ್ಯ ಪದ್ಮರಾಜ್ ತಮಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ, ಆ ಪದಗಳನ್ನು ಇಲ್ಲಿ ಹೇಳಲು ಸಾಧ್ಯವಿಲ್ಲ, ನನಗೆ ಮತ್ತು ನನ್ನ ಕುಟುಂಬಕ್ಕೆ ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದರು.

ಬಸವೇಶ್ವರ ನಗರದಲ್ಲಿ ಕ್ಲಬ್ ನಡೆಸುವ ಈ ವ್ಯಕ್ತಿ ರಾತ್ರಿಯಾಗುತ್ತಿದ್ದಂತೆ ಪಾನಮತ್ತನಾಗಿ ನನ್ನನ್ನೂ ಸೇರಿದಂತೆ ಕುಟುಂಬದ ಅನೇಕರಿಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ್ದಾನೆ.

ಸುರೇಶ್‌ಕುಮಾರ್ ಅವರಂತಹ ಶಾಸಕರು ಶಕ್ತಿಯಿಲ್ಲದೆ ದೂರು ನೀಡಿಲ್ಲ, ಸದರಿ ವ್ಯಕ್ತಿಯನ್ನು ಬಂಧಿಸಲು ಪೊಲೀಸರು ರಾತ್ರಿಯಿಡೀ ಏಳೆಂಟು ಗಂಟೆ ಅವರ ಮನೆ ಎದುರು ಕಾವಲು ಕಾದಿದ್ದಾರೆ. ಬಾಗಿಲು ತೆರೆದು ಹೊರಬರದೇ ಒಳಗಿದ್ದ ವ್ಯಕ್ತಿ ಬೆಳಗ್ಗೆ 10 ಗಂಟೆಗೆ ನಿಶೆ ಇಳಿದ ಮೇಲೆ ಹೊರಹೋಗಿದ್ದಾನೆ. ಇಂತಹವರು ಸಮಾಜಕ್ಕೆ ಬೇಕೇ? ಎಂದು ಪ್ರಶ್ನಿಸಿದರು.

ಸದರಿ ವ್ಯಕ್ತಿಯನ್ನು ಬಂಧಿಸಿ 6 ತಿಂಗಳ ಕಾಲ ಗಡಿಪಾರು ಮಾಡಬೇಕು, ತಮ್ಮ ಕುಟುಂಬಕ್ಕೆ ರಕ್ಷಣೆ ನೀಡಬೇಕು, ಬೆಂಗಳೂರಿನಲ್ಲಿ ಅನೈತಿಕವಾಗಿ ನಡೆಯುತ್ತಿರುವ ಕ್ಲಬ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಶಾಸಕ ಸುರೇಶ್‌ಕುಮಾರ್ ಮಾತನಾಡಿ, ಸದನದಲ್ಲಿ ಶಾಸಕರಿಗೆ ರಕ್ಷಣೆ ಇಲ್ಲ ಎಂದಾದರೆ ಜನರಿಗೆ ತಪ್ಪು ಸಂದೇಶ ಹೋಗುತ್ತದೆ, ರಾತ್ರಿ (4ನೇ ಪುಟಕ್ಕೆ)

## ವಿದ್ಯಾಭ್ಯಾಸದ ಜೊತೆಗೆ ಸಾಂಸ್ಕೃತಿಕ ಕಲೆಗಳಲ್ಲೂ ತೊಡಗಿಸಿಕೊಳ್ಳಬೇಕು



### 'ಚೈತನ್ಯ ಸಾಂಸ್ಕೃತಿಕ ಸೌರಭ' ಕಾರ್ಯಕ್ರಮದಲ್ಲಿ ಡಾ.ಪಿ. ಎಸ್. ಸುರೇಶ್ ಬಾಬು ಸಲಹೆ

ದಾವಣಗೆರೆ, ಫೆ. 13- ಮಕ್ಕಳು ವಿದ್ಯಾಭ್ಯಾಸದ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಹಿರಿಯ ವೈದ್ಯರು ಮತ್ತು ಮಕ್ಕಳ ತಜ್ಞರಾದ ಡಾ. ಪಿ.ಎಸ್. ಸುರೇಶ್ ಬಾಬು ಸಲಹೆ ನೀಡಿದರು.

ಅಶ್ವತ್ಥ ಪುರ ದೇಶಸ್ತ ಬ್ರಾಹ್ಮಣ ಸಮಾಜದಿಂದ ಶ್ರೀ ಶಂಕರ ಸಮುದಾಯ ಭವನದಲ್ಲಿ ನಡೆದ 11 ನೇ ವರ್ಷದ 'ಚೈತನ್ಯ ಸಾಂಸ್ಕೃತಿಕ ಸೌರಭ' ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪೋಷಕರು ತಮ್ಮ ಮಕ್ಕಳನ್ನು ವಿದ್ಯಾಭ್ಯಾಸದ ಜೊತೆಗೆ ಸಾಂಸ್ಕೃತಿಕ ಕ್ರೀಡಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಸಲಹೆ ನೀಡಿದರು.

ಕೆಲವು ಪೋಷಕರು ಸಣ್ಣ ಮಕ್ಕಳಿಗೆ ಆಡಲು ಮೊಬೈಲ್ ಕೊಡುವ ಮೂಲಕ ಮೊಬೈಲ್ ನಿಂದ ಮಕ್ಕಳಿಗೆ ಬೇರೆ ಬೇರೆ ರೀತಿಯಲ್ಲಿ ಆರೋಗ್ಯ ಪರಿಣಾಮ ಬೀರಬಹುದು ಎಂದು ಸಭೆಯಲ್ಲಿ ನೆರೆದಿದ್ದ ಪೋಷಕರಿಗೆ ಸಲಹೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ದಾವಣಗೆರೆಯ ಹಿರಿಯ ವೈದ್ಯರಾದ ಡಾ. ಶ್ರೀಪಾದ್ ಭಟ್ ಮಾತನಾಡಿ, ಸಮಾಜದ ನಡೆಸುವ ಈ ತರಹದ ಕಾರ್ಯಕ್ರಮಗಳು ಮಕ್ಕಳಿಗೆ ಉತ್ತೇಜನ ನೀಡುತ್ತವೆ. ಅವರ ಪ್ರತಿಭೆಗಳನ್ನು ತೋರಿಸಲು ಸೂಕ್ತ ವೇದಿಕೆ ಎಂದು ಹೇಳಿದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿ ದಕ್ಷಿಣ ಕನ್ನಡ ಜಿಲ್ಲೆ ಮೂಡಬಿದ್ರೆಯ ಅಶ್ವತ್ಥ್ ಪುರ ಶ್ರೀರಾಮಚಂದ್ರ ದೇವಸ್ಥಾನದ ಆಡಳಿತ ಮೊಕ್ತೇಸರ ರಘುನಾಥ್ ಒಂಟಿಮಾರ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ಕಳೆದ 11 ವರ್ಷಗಳಿಂದ ಕಾರ್ಯಕ್ರಮ (4ನೇ ಪುಟಕ್ಕೆ)

## ಬಹುತೇಕ ಜನಪ್ರತಿನಿಧಿಗಳಿಗೆ ಸಂವಿಧಾನದ ಪರಿಚಯವೇ ಇಲ್ಲ

### ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದಲ್ಲಿ ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಸ್ವಾಮೀಜಿ



ಸಾಣೇಹಳ್ಳಿ, ಫೆ.14- ನಮ್ಮ ಜನಪ್ರತಿನಿಧಿಗಳು ಸಂವಿಧಾನದ ಆಶಯಗಳನ್ನು ಅರ್ಥ ಮಾಡಿಕೊಂಡಿದ್ದರೆ ನಮ್ಮ ದೇಶ ಕಲ್ಯಾಣ ನಾಡಾಗುತ್ತಿತ್ತು ಎಂದು ಸಾಣೇಹಳ್ಳಿ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಭಿಪ್ರಾಯಿಸಿದರು.

ಸಂವಿಧಾನ ಜಾಗೃತಿ ಜಾಥಾ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದ ಅವರು ಸಂವಿಧಾನ ಜಾರಿಗೆ ಬಂದು 75 ವರ್ಷಗಳಾದವು. ಈ ವರ್ಷಗಳ ಸಿಂಹಾವಲೋಕನ ಮಾಡಿದರೆ, ನಮ್ಮ ಸಂವಿಧಾನಕ್ಕೆ ಅನುಗುಣವಾಗಿ ನಮ್ಮ ರಾಜಕೀಯ ನೇತಾರರು, ಜನಪ್ರತಿನಿಧಿಗಳು ನಡೆದುಕೊಳ್ಳುತ್ತಿದ್ದಾರೆಯೇ ? ಎಂದು ಪ್ರಶ್ನೆ ಹಾಕಿದರೆ ಉತ್ತರ ಹೇಳುವುದು ತುಂಬಾ ಕಷ್ಟ. ನಾವು ಆಯ್ಕೆ ಮಾಡಿ ಕಳಿಸುವಂತಹ ಜನಪ್ರತಿನಿಧಿಗಳಿಗೆ ಸಂವಿಧಾನದ ಪರಿಚಯವೇ ಬಹುತೇಕ ಜನರಿಗೆ ಇಲ್ಲವಾಗಿದೆ ಎಂದರು.

ಇಡೀ ಸಂವಿಧಾನವನ್ನು ಓದಿಕೊಂಡ ಜನಪ್ರತಿನಿಧಿಗಳು ಬೆರಳೆಣಿಕೆಯಷ್ಟು ಮಾತ್ರ. ಜನಪ್ರನಿಧಿಯಾಗಲಿಕ್ಕೆ ಅರ್ಹತೆ ಇರಬೇಕು. ಅದರ ಬದಲಾಗಿ ಈಗ ಪ್ರಧಾನವಾಗಿರುವುದು ಜಾತಿ, ಹಣ, ಅಧಿಕಾರ. ಹಾಗಾಗಿ ಅವಿದ್ಯಾವಂತರು ಕೂಡ ನಮ್ಮ ಜನಪ್ರತಿನಿಧಿಗಳಾಗಿರುವ ನಿದರ್ಶನಗಳು ಬೇಕಾದಷ್ಟಿವೆ.

ಅವಿದ್ಯಾವಂತರು ಜನಪ್ರನಿಧಿಗಳಾ ದಾಗ, ಹೇಗೆ ನಮ್ಮ ಸಂವಿಧಾನವನ್ನು ಅಧ್ಯಯನ ಮಾಡಲಿಕ್ಕೆ ಸಾಧ್ಯ. ಹರಿಯಾಣ, ಪಂಜಾಬ್ ರಾಜ್ಯಗಳ ರೈತರು ನಮಗೆ ಬೆಂಬಲ ಬೆಲೆಯನ್ನು ಕೊಡಿ, ನಮ್ಮ ಆಶಯಗಳನ್ನು ಈಡೇರಿಸಿ ಎಂದು ಬಹುದೊಡ್ಡ ಹೋರಾಟಕ್ಕೆ ಸನ್ನದ್ಧರಾಗಿ ಬಂದರೆ ಆ ಹೋರಾಟವನ್ನು ತಡೆಗಟ್ಟಲಿಕ್ಕೆ ಏನು ಬೇಕೋ ಆ ವ್ಯವಸ್ಥೆಯನ್ನು ಸರ್ಕಾರ ಮಾಡಿತು.

ಇದು ಪ್ರಜಾಪ್ರಭುತ್ವದ ಸೋಲು. ಹಾಗಾಗಿ ಪ್ರಜೆಗಳು ಯೋಗ್ಯ ಜನಪ್ರತಿನಿಧಿಯನ್ನು ಆಯ್ಕೆ ಮಾಡಿದರೆ ಒಳ್ಳೆಯ ಆಡಳಿತವನ್ನು ಕೊಡಲಿಕ್ಕೆ ಸಾಧ್ಯ. ಆದರ್ಶ ಜನಪ್ರತಿನಿಧಿ ಇಲ್ಲದಿದ್ದರೆ ಆದರ್ಶ ರಾಜ್ಯವೂ ಇಲ್ಲವಾಗುತ್ತದೆ ಎಂದರು.

**'ಶ್ರೀ ಬಸವಣ್ಣ 'ಸಾಂಸ್ಕೃತಿಕ ನಾಯಕ' ಎಂಬ ಸರ್ಕಾರದ ನಿರ್ಣಯ ಅಭಿನಂದನಾರ್ಹ. ದಿ.17ರಂದು 'ಬಸವ ತತ್ವ' ತಿಳಿದುಕೊಳ್ಳುವ ಕೆಲಸ ಆಗಬೇಕು': ಪಂಡಿತಾರಾಧ್ಯ ಸ್ವಾಮೀಜಿ**


ರಾಜ್ಯ ಸರ್ಕಾರ ವಿಶ್ವಗುರು ಬಸವಣ್ಣ ಸಾಂಸ್ಕೃತಿಕ ನಾಯಕ ಅಂತ ಒಂದು ನಿರ್ಣಯ ಮಾಡಿದೆ. ಇದು ಅಭಿನಂದನಾರ್ಹ.


ಬಸವಣ್ಣ ನವರಿಗೆ ಕಿರೀಟದ ಬಗ್ಗೆ ವ್ಯಾಮೋಹ ಇರಲಿಲ್ಲ. ಸರಕಾರ ತುಂಬಾ ಯೋಚನೆ ಮಾಡಿ ತಾಳೆಗರಿಯಲ್ಲಿ ಬರೆಯುವಂಥ ಬಸವಣ್ಣನ ಭಾವಚಿತ್ರ ಹಾಕಬೇಕೆಂದು ಜಾರಿಯಲ್ಲಿ ತಂದಿದೆ. ಹಾಗಾಗಿ 17 ನೇ ತಾರೀಖು ಅದೊಂದು ಸಂಭ್ರಮದ ದಿನಾಚರಣೆ ಆಗಬೇಕು. ಆವೊತ್ತು ಬಸವಣ್ಣನವರ ವಚನ ಓದುವುದು, ಚರ್ಚೆ ಮಾಡುವುದು, ಬಸವತತ್ವವನ್ನು ತಿಳಿದುಕೊಳ್ಳುವ ಕೆಲಸ ಆಗಬೇಕು. ಸಾಣೇಹಳ್ಳಿಯ ಮಠದಲ್ಲೂ ಅಂದು ಬಸವಣ್ಣನ ಭಾವಚಿತ್ರವಿಟ್ಟು ಅದಕ್ಕೆ ಪುಷ್ಪವನ್ನು ಅರ್ಪಿಸಿ ವಚನಗಳನ್ನು ಓದಿ ಕಾರ್ಯಕ್ರಮ ನಡೆಸಲಾಗುವುದು ಎಂದರು.


ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಶಶಿಧರ ಪ್ರಾಸ್ತಾವಿಕವಾಗಿ ಮಾತನಾಡಿದರು. ಉಪನ್ಯಾಸಕ ಕಾಂತರಾಜ್ ಸಂವಿಧಾನದ ಬಗ್ಗೆ ಮಾತನಾಡಿದರು.

ವೇದಿಕೆಯ ಮೇಲೆ ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ಗಂಗಾಧರ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪ್ರೇಮ ಬಸವರಾಜ್, ಪಿಡಿಓ ಸ್ವಾಮಿ ಮತ್ತಿತರರಿದ್ದರು. ನಿವೃತ್ತ ಶಿಕ್ಷಕ ವೀರಭದ್ರಪ್ಪ ಸ್ವಾಗತಿಸಿದರೆ, ಮಲ್ಲಿಕಾರ್ಜುನ್ ವಂದಿಸಿದರು.

## ರಾಜ್ಯಸಭೆಗೆ ಕಾಂಗ್ರೆಸ್‌ನಿಂದ ಮಾಕೆನ್, ಚಂದ್ರಶೇಖರ್, ನಾಸಿರ್ ಹುಸೇನ್







ಬೆಂಗಳೂರು, ಫೆ. 14- ವಿಧಾನ ಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27 ರಂದು ನಡೆಯುತ್ತಿರುವ ಚುನಾವಣೆಗೆ ಕಾಂಗ್ರೆಸ್ ತನ್ನ ಮೂವರು ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಎಐಸಿಸಿ ವಕ್ತಾರ ಅಜಯ್ ಮಾಕೆನ್, ಜಿ.ಸಿ. ಚಂದ್ರಶೇಖರ್ ಹಾಗೂ ಡಾ. ಸೈಯ್ಯದ್ ನಾಸಿರ್ ಹುಸೇನ್ ಅಭ್ಯರ್ಥಿಗಳಾಗಿದ್ದಾರೆ.

ಲೋಕಸಭೆ ಮತ್ತು ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ಸಂಬಂಧ ಇಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಮೂವರ ಹೆಸರುಗಳನ್ನು ವರಿಷ್ಠರಿಗೆ ಶಿಫಾರಸು ಮಾಡಿತ್ತು.

ಶಿಫಾರಸ್ಸು ಮಾಡಿದ ಕೆಲವೇ ನಿಮಿಷಗಳಲ್ಲಿ ಎಐಸಿಸಿ ಈ ಮೂವರನ್ನು ಅಭ್ಯರ್ಥಿಗಳನ್ನಾಗಿ ಪ್ರಕಟಿಸಿದೆ.

ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆಯುತ್ತಿರುವ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ನಾಳೆ ಕೊನೆಯ ದಿನವಾಗಿರುತ್ತದೆ.

ಈಗಾಗಲೇ ಬಿಜೆಪಿ ತನಗೆ ದಕ್ಕಬಹುದಾದ ಒಂದು ಸ್ಥಾನಕ್ಕೆ ಅಭ್ಯರ್ಥಿಯನ್ನು ಹೆಸರಿಸಿದೆ.

ಕಾಂಗ್ರೆಸ್ ಯಾವ ರಾಜ್ಯಗಳಲ್ಲಿ ಬಲಿಷ್ಠವಾಗಿದೆಯೋ ಅಂತಹ ರಾಜ್ಯಗಳಿಂದ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಸೇರಿದಂತೆ ಕೆಲವು ಮುಖಂಡರನ್ನು ರಾಜ್ಯಸಭೆಗೆ ಕಳುಹಿಸಲು ಹೆಸರು ಪ್ರಕಟಿಸಿದೆ.

ಅಂತೆಯೇ ಕರ್ನಾಟಕದಿಂದ ಎಐಸಿಸಿ ವಕ್ತಾರ ಅಜಯ್ ಮಾಕೆನ್ ಅವರಿಗೆ ಅವಕಾಶ ಮಾಡಿಕೊಟ್ಟಿದೆ.

ಇದಲ್ಲದೆ, ಜಿ.ಸಿ. ಚಂದ್ರಶೇಖರ್ ಮತ್ತು ಸೈಯ್ಯದ್ ನಾಸಿರ್ ಹುಸೇನ್ ಮತ್ತೊಂದು ಅವಧಿಗೆ ಅವರನ್ನೇ ಕಣಕ್ಕಿಳಿಸಿದೆ.

ವಿಧಾನಸಭೆಯಲ್ಲಿನ ಬಲಾಬಲದ ಆಧಾರದ ಮೇಲೆ ಕಾಂಗ್ರೆಸ್ (2ನೇ ಪುಟಕ್ಕೆ)

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಶ್ರೀ ಗಿರಿಜಾ ಶಂಕರ ಕಲ್ಯಾಣೋತ್ಸವ



ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ 26 ನೇ ವಾರ್ಷಿಕೋತ್ಸವ ಹಾಗೂ ರಥೋತ್ಸವ ಕಾರ್ಯಕ್ರಮವು ನಡೆಯುತ್ತಿದ್ದು, ಇಂದು ಮತ್ತು ನಾಳೆ ವಿಶೇಷ ಪೂಜೆಗಳು ಜರುಗಲಿವೆ.

ಇಂದು ಬೆಳಿಗ್ಗೆ 8 ಗಂಟೆಗೆ ಪಂಚಾಮೃತ ಅಭಿಷೇಕ, ಮಂಡಲ ಆರಾಧನೆ, ರುದ್ರಹೋಮ, ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಲಿವೆ. ಸಂಜೆ 5 ಕ್ಕೆ ಶ್ರೀ ಗಿರಿಜಾ ಶಂಕರ ಕಲ್ಯಾಣ ಹಮ್ಮಿಕೊಳ್ಳಲಾಗಿದ್ದು, ಬೆಂಗಳೂರಿನ ಪುರೋಹಿತರಾದ ಜಿ. ಪ್ರವೀಣ್ ಅವರಿಂದ ನಡೆಯಲಿದೆ. ಇದಲ್ಲದೇ ಪ್ರತಿ ಶನಿವಾರ ಸಂಜೆ 6.30 ಕ್ಕೆ ದೇವಸ್ಥಾನದಲ್ಲಿ ಹನುಮಾನ್ ಚಾಲಿಸ್ ಪಠಣ ನಡೆಯಲಿದೆ.

ನಾಳೆ ಶುಕ್ರವಾರ ದೇವಿಗೆ ಬೆಳಿಗ್ಗೆ 8 ಕ್ಕೆ ಪಂಚದ್ರವ್ಯ ಪಂಚಾಮೃತಾಭಿಷೇಕ ಮಾಡಲಾಗುವುದು. ಮಧ್ಯಾಹ್ನ 12.05 ಕ್ಕೆ ಶ್ರೀ ಮಾತಾ ಅನ್ನಪೂರ್ಣೇಶ್ವರಿ ರಥೋತ್ಸವ ಜರುಗಲಿದೆ. ಸಂಜೆ 5 ಕ್ಕೆ ಶ್ರೀ ವಾಸವಿ ಯುವತಿಯರ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ.

## ರಾಜ್ಯಮಟ್ಟದ ಟೆನ್ನಿಸ್ ಬಾಲ್ ಪಂದ್ಯ : ವೈಸಿಸಿ ತಂಡ ಪ್ರಥಮ



ದಾವಣಗೆರೆ, ಫೆ.14- ನಗರದ ಜಿಲ್ಲಾ ಕ್ರೀಡಾಂಗಣ ಮತ್ತು ಐಟಿಐ ಕ್ರೀಡಾಂಗಣದಲ್ಲಿ ರಾಜ್ಯಮಟ್ಟದ ಕೆಪಿಟಿಸಿಎಲ್ ಮತ್ತು ಎಲ್ಲಾ ಎಸ್ಕಾಮ್ಸ್ ಅಧಿಕಾರಿಗಳ ಹಾಗೂ ನೌಕರಿಗಾರರ ನೀಕಂ ನಾಕ್ ಔಟ್ ಮಾದರಿಯ ಟೆನ್ನಿಸ್ ಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. 24 ತಂಡಗಳು ಭಾಗವಹಿಸಿದ್ದು ವೈಸಿಸಿ ತಂಡದವರು ಪ್ರಥಮ ಸ್ಥಾನ ಗಳಿಸಿ ಬಹುಮಾನವಾಗಿ 1 ಲಕ್ಷ ರೂ. ನಗದು ಹಾಗೂ ಪಾರಿತೋಷಕವನ್ನು ತಮ್ಮ ಮುಡಿಗೇರಿಸಿಕೊಂಡರು.

## ಸಾಧು ಲಿಂಗಾಯತ ನೌಕರರ ಸಂಘದ ಅಧ್ಯಕ್ಷರಾಗಿ ಡಾ. ಚೇತನ್ ಬಣಕಾರ್



ಹರಪನಹಳ್ಳಿ

ಹರಪನಹಳ್ಳಿ, ಫೆ. 14 - ಸಾಧು ಲಿಂಗಾಯತ ನೌಕರರ ಸಂಘದ ನೂತನ ಕಾರ್ಯಕಾರಿ ಸಮಿತಿಗೆ ಅಧ್ಯಕ್ಷರಾಗಿ ಡಾ. ಚೇತನ್ ಬಣಕಾರ್, ಕಾರ್ಯಾಧ್ಯಕ್ಷ ಸಿದ್ದಪ್ಪ ಆರ್ ಮಾರೇರ್, ಗೌರವಾಧ್ಯಕ್ಷ ಕೆ. ಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಬಂದೋಳ್ ಸಿದ್ದೇಶ್, ಖಜಾಂಚಿ ಕೆ.ಜಿ ಶಿವಕುಮಾರ್, ಉಪಾಧ್ಯಕ್ಷರು ಎಚ್. ಕೆಂಚಪ್ಪ, ಸಿ.ಜಿ.ಮುನಿಯಪ್ಪ, ಸವಿತಾ ಆರ್.ಎಸ್, ಸಹ ಕಾರ್ಯದರ್ಶಿಗಳು- ಎಂ.ಮಂಜಪ್ಪ, ಕೆ. ಬಸವನಗೌಡ, ಸಂಘಟನಾ ಕಾರ್ಯದರ್ಶಿ - ವಿ ಮಲ್ಲಿಕಾರ್ಜುನ, ಉಷಾರಾಣಿ, ಲೆಕ್ಕಪರಿಶೋಧಕ ಪೂಜಾರ್ ಮಲ್ಲಿಕಾರ್ಜುನ್, ವಕ್ತಾರರು ವಿಜಯ ಬಣಕಾರ್ ಅವರುಗಳನ್ನು ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕೆ.ಸಿದ್ದಲಿಂಗನಗೌಡ, ಹೆಚ್. ದೇವೇಂದ್ರ ಗೌಡ, ಎನ್. ಜೆ.ಉದಯಶಂಕರ್ , ಕೆ.ಶಿವಯೋಗಿ ಆವಿನ, ಲೋಕೇಶ್, ಪರಮೇಶ್ವರಪ್ಪ ಎಸ್, ಕರಿಬಸಪ್ಪ, ಎಂ.ಪ್ರಭು, ಡಿ.ದಯಾನಂದ, ಆರ್.ಎಸ್ ಮಂಜುನಾಥ, ಕೆ. ಜಿ ಬಸವರಾಜ, ಎಮ್. ಕೆಂಚನಗೌಡ, ಕೆ.ರೇವಣಸಿದ್ದಪ್ಪ, ಎಸ್. ಬಸವ ರಾಜ, ಕೆ. ವಿ ಬಸವರಾಜ, ಕೆ.ಹರೀಶ್, ಕೆ.ಮೂಗಪ್ಪ ಇನ್ನು ಮುಂತಾದವರು ಹಾಜರಿದ್ದರು.


## ನಗರದ ಶ್ರೀ ಶನೈಶ್ವರ ದೇವಸ್ಥಾನದಲ್ಲಿ ಇಂದು 25ನೇ ವಾರ್ಷಿಕೋತ್ಸವ



ಪಿ.ಬಿ.ರಸ್ತೆಯ ಕರೂರ್ ಕ್ರಾಸ್ ಹತ್ತಿರ, ಪಂಚ ದೇವಸ್ಥಾನಗಳ ಮಹಾಕ್ಷೇತ್ರದಲ್ಲಿ 25ನೇ ವಾರ್ಷಿಕೋತ್ಸವದ ಪ್ರಯುಕ್ತ ಇಂದು ಮತ್ತು ನಾಳೆ ಬೆಳಿಗ್ಗೆ ಪಂಚದೇವರುಗಳಿಗೆ ಹಾಗೂ ಕಾಶಿ ಮಹಾಲಿಂಗೇಶ್ವರಗೆ ಪಂಚಾಮೃತ ಹಾಗೂ ತೈಲಾಭಿಷೇಕವಿರುತ್ತದೆ.

ಇಂದು ಬೆಳಿಗ್ಗೆ 9. ಗಂಟೆಗೆ ಗಣಹೋಮ, ರುದ್ರಹೋಮ ಹಾಗೂ ರುದ್ರ ಪಠಣವಿರುತ್ತದೆ. ನಾಳೆ ಶುಕ್ರವಾರ ಬೆಳಿಗ್ಗೆ 9 ಗಂಟೆಗೆ ಚಂಡಿ ಹೋಮ ನಂತರ 25 ಮುತ್ತೈದೆಯವರಿಗೆ ಬಾಗಿನ ಅರ್ಪಣೆ ಹಾಗೂ ಗಾನ ಸೌರಭ ಸಂಗೀತ ವಿದ್ಯಾಲಯದಿಂದ ವೀಣಾ ವಾದನ ಕಾರ್ಯಕ್ರಮವಿರುತ್ತದೆ.

## ಮಲೇಬೆನ್ನೂರಿನಲ್ಲಿಂದು ಕಳಸಾರೋಹಣ




ಪಟ್ಟಣದ ಎ.ಕೆ.ಕಾಲೋನಿ ಹಟ್ಟಿ ಶ್ರೀ ದುರ್ಗಾಂಬಿಕಾ ದೇವಸ್ಥಾನದ ನೂತನ ಗೋಪುರಕ್ಕೆ ಕಳಸಾರೋಹಣ ಕಾರ್ಯಕ್ರಮವು ಇಂದು ಬೆಳಿಗ್ಗೆ 8.30 ರಿಂದ 9.30 ರವರೆಗೆ ಜರುಗಲಿದೆ. ಶ್ರೀ ಬಸವ ಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಶ್ರೀ ಷಡಕ್ಷರಮುನಿ ಸ್ವಾಮೀಜಿ ಸಾನ್ನಿಧ್ಯ ವಹಿಸುವರೆಂದು ಎ.ಕೆ.ನರಸಿಂಹಪ್ಪ, ಎ.ಕೆ.ಲೋಕೇಶ್, ಎ.ಕೆ.ನಾಗರಾಜ್, ಎ.ಕೆ.ಪ್ರಕಾಶ್ ತಿಳಿಸಿದ್ದಾರೆ.

## ಕಡ್ಲೇಬಾಳ್‌ನಲ್ಲಿ ಇಂದು ರಥೋತ್ಸವ ಸೇವೆ

ದಾವಣಗೆರೆ ಸಮೀಪದ ಕಡ್ಲೇಬಾಳ್‌ನಲ್ಲಿರುವ ಶ್ರೀ ಕ್ಷೇತ್ರ ನಾಗ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನದಲ್ಲಿ ಇಂದು ಸ್ವಾಮಿಗೆ ಪಂಚಾ ಮೃತ ಅಭಿಷೇಕ, ರುದ್ರಾಭಿಷೇಕ, ಅಷ್ಟೋತ್ತರ ಪೂಜೆ, ಆಶ್ಲೇಷ ಬಲಿ ಪೂಜೆ, ಸುಬ್ರಹ್ಮಣ್ಯ ಮೂಲಮಂತ್ರ ಹೋಮ, ರಥೋತ್ಸವ, ಪ್ರಸಾದ ಸೇವೆ ಇರುತ್ತದೆ.

## ಎಲೆಬೇತೂರಿನಲ್ಲಿ ಮಾರಿಕಾಂಬ ದೇವಿ ದೇವಸ್ಥಾನದ ಉದ್ಘಾಟನೆ



ದಾವಣಗೆರೆ, ಫೆ. 14- ತಾಲ್ಲೂಕಿನ ಎಲೆಬೇತೂರು ಗ್ರಾಮದಲ್ಲಿ ಶ್ರೀ ಮಾರಿಕಾಂಬ ದೇವಿಯ ದೇವಸ್ಥಾನ ಉದ್ಘಾಟನೆ ಮತ್ತು ಶ್ರೀ ದೇವಿಯ ಪ್ರತಿಷ್ಠಾಪನೆ ಹಾಗೂ ಕಳಸಾರೋಹಣವು ವಿಜೃಂಭಣೆಯಿಂದ ಮೊನ್ನೆ ನಡೆಯಿತು.

ಶ್ರೀ ಮಾರಿಕಾಂಬ ದೇವಿಗೆ ರಾತ್ರಿ ಪ್ರಾಣ ಪ್ರತಿಷ್ಠಾಪನೆ, ಹೋಮ ಮುಂಜಾನೆ ಪಂಚಾಮೃತ ಅಭಿಷೇಕ, ಶ್ರೀದೇವಿಯ ಗರ್ಭಗುಡಿ ಪ್ರವೇಶ ಪ್ರತಿಷ್ಠಾಪನೆ ನಡೆದ ನಂತರ ಹೂವಿನ ಅಲಂಕಾರ, ಮಹಾಮಂಗಳಾರತಿ ಗೋಪುರಕ್ಕೆ ಕಳಸಾರೋಹಣದ ವಿಧಿ-ವಿಧಾನಗಳೊಂದಿಗೆ ನಡೆಯಿತು.

SGB ACADEMY FOR PUC SCIENCE

Saraswathi Badavane, Davangere.

Hiring Lecturers for

Physics, chemistry, biology & English

Experience Minimum 2 years

Send Resume to :

basavarajsaritha@gmail.com

abhishekpujar2@gmail.com

Contact :

89703 36135, 95359 23697

ಹುಟ್ಟುಹಬ್ಬದ ಶುಭಾಶಯಗಳು

ಇಂದು ತಮ್ಮ ಜನ್ಮ ದಿನದ ಸಂಭ್ರಮದಲ್ಲಿರುವ
ಆದಿತ್ಯ ಅಲ್ಯೂಮಿನಿಯಂ, ಆದಿತ್ಯ ಎಂಟರ್ ಪ್ರೈಸಸ್
ಮತ್ತು ಆದಿತ್ಯ ಫ್ಯಾಬ್ರಿಕೇಟರ್ಸ್ ಮಾಲೀಕರೂ,
ಹಿಂದೂ ಮಹಾಗಣಪತಿ ಟ್ರಸ್ಟಿಗಳೂ, ನಮ್ಮ ಆತ್ಮೀಯರೂ ಆದ

ಶ್ರೀ ಮಂಜುನಾಥ ಎನ್.


ಅವರಿಗೆ 44ನೇ ವರ್ಷದ
ಹುಟ್ಟುಹಬ್ಬದ ಹಾರ್ದಿಕ ಶುಭಾಶಯ ಕೋರುವವರು :





ಎಂ.ವಿ. ಜಯಪ್ರಕಾಶ್ ಮಾಗಿ ಸ್ನೇಹ ಬಳಗ

ಸ್ವದೇಶಾಗಮನ – ಸುಸ್ವಾಗತ



ದಿನಾಂಕ 11.02.2024ರಂದು ಶ್ರೀಲಂಕಾ ದೇಶದ ರಾಜಧಾನಿ ಕೊಲಂಬೋದಲ್ಲಿ ನಡೆದ ಬಸವ ತತ್ವ ಪ್ರಚಾರದ ಕುರಿತು, ಅಂತರರಾಷ್ಟ್ರೀಯ ಬಸವ ತತ್ವ ಸಮ್ಮೇಳನದಲ್ಲಿ ಭಾಗವಹಿಸಿ ಜಗಜ್ಯೋತಿ ಬಸವೇಶ್ವರ ಕುರಿತು ಉಪನ್ಯಾಸ ನೀಡಿ ಜಯಭೇರಿ ಭಾರಿಸಿ, ತಾಯ್ನಾಡಿಗೆ ಮರಳುತ್ತಿರುವ, ನಮ್ಮೆಲ್ಲರ ನೆಚ್ಚಿನ ಶಿಕ್ಷಣ ತಜ್ಞರು, ಶಿಕ್ಷಣ ರತ್ನ ಪುರಸ್ಕೃತರು ಹಾಗೂ ನಿವೃತ್ತ ಜಂಟಿ ನಿರ್ದೇಶಕರೂ, ನೌಕರರ ಗೃಹ ನಿರ್ಮಾಣ ಸಹಕಾರಿ ಸಂಘದ ಗೌರವಾಧ್ಯಕ್ಷರು, ನಮ್ಮೆಲ್ಲರ ನೆಚ್ಚಿನ ಗುರುಗಳು, ಮಾರ್ಗದರ್ಶಕರೂ ಆದ ಸರಳ ಸಜ್ಜನಿಕೆಯ

ಶ್ರೀ ಹೆಚ್.ಕೆ. ಲಿಂಗರಾಜ್ ಅವರಿಗೆ
ಹೃದಯಪೂರ್ವಕ ಸುಸ್ವಾಗತ.

ಶಿಷ್ಯ ವರ್ಗ, ಸ್ನೇಹಿತರು ಮತ್ತು ಅಭಿಮಾನಿ ಬಳಗ ಹಾಗೂ ನೌಕರರ ಗೃಹ ನಿರ್ಮಾಣ ಸಹಕಾರಿ ಸಂಘ, ದಾವಣಗೆರೆ.

## ಶ್ರೀಮತಿ ಸೀತಮ್ಮ ನಾಗನಾಯ್ಕ ನಿಧನ



ದಾವಣಗೆರೆ ಭಾರತ್ ಕಾಲೋನಿ 11ನೇ ಕ್ರಾಸ್ ವಾಸಿ ನಗರಸಭೆ ಮಾಜಿ ಉಪಾಧ್ಯಕ್ಷರಾದ

**ಶ್ರೀಮತಿ ಸೀತಮ್ಮ ನಾಗನಾಯ್ಕ**

ಅವರು ದಿನಾಂಕ: 14.2.2024ರ ಬುಧವಾರ ಮಧ್ಯಾಹ್ನ 1.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 74 ವರ್ಷ ವಯಸ್ಸಾಗಿತ್ತು.

4 ಜನ ಪುತ್ರರು, 3 ಜನ ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15-2-2024ರ ಗುರುವಾರ ಮಧ್ಯಾಹ್ನ 1-30ಕ್ಕೆ ನಗರದ ಲೇಬರ್ ಕಾಲೋನಿಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತ ಕುಟುಂಬ ವರ್ಗ:

- ಶ್ರೀಮತಿ ರೇಣುಕಾಬಾಯಿ ಶ್ರೀ ವೆಂಕಟೇಶನಾಯ್ಕ
- ಶ್ರೀಮತಿ ಅಂಬಿಕಾ ಶ್ರೀ ಕೃಷ್ಣನಾಯ್ಕ
- ಶ್ರೀಮತಿ ಶಾರದಾಬಾಯಿ ಶ್ರೀ ಉಮೇಶನಾಯ್ಕ
- ಶ್ರೀಮತಿ ದೇವಿಬಾಯಿ ಶ್ರೀ ಹಾಲೇಶ್ ನಾಯ್ಕ
- ಶ್ರೀಮತಿ ಸವಿತಾಬಾಯಿ ಶ್ರೀ ಗೋವಿಂದನಾಯ್ಕ
- ಶ್ರೀಮತಿ ನೀಲಾಬಾಯಿ ಶ್ರೀ ತೊಳಚಾನಾಯ್ಕ
- ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಗೌನಿ ವಂಶಸ್ಥರು, ದಾವಣಗೆರೆ.

ಫೋ. :94485 34258, 98449 56175

ಜನ್ಮದಿನದ ಶುಭಾಶಯಗಳು

ಆದಿತ್ಯ ಅಲ್ಯೂಮಿನಿಯಂ
ಆದಿತ್ಯ ಎಂಟರ್ ಪ್ರೈಸಸ್
ಆದಿತ್ಯ ಫ್ಯಾಬ್ರಿಕೇಟರ್ಸ್
ಮಾಲೀಕರಾದ

ಶ್ರೀ ಮಂಜುನಾಥ್ ಎನ್.

ಇವರು, ಇಂದು ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ ಈ ಶುಭ ಸಂದರ್ಭದಲ್ಲಿ ಭಗವಂತನು ಶ್ರೀಯುತರಿಗೆ ಆಯುರಾರೋಗ್ಯ, ಕೀರ್ತಿ, ಯಶಸ್ಸನ್ನು ಕರುಣಿಸಲೆಂದು ಪ್ರಾರ್ಥಿಸುತ್ತಾ...

"ಸ್ನೇಹ, ಪ್ರೀತಿಯಲ್ಲಿ ನಿಮಗೆ
ಸರಿಸಾಟಿ ಯಾರಿಲ್ಲ...
ಮುಗ್ಧ ಮನಸ್ಸಿರುವ ನಿಮ್ಮಲ್ಲಿ
ದ್ವೇಷಕ್ಕೆ ಜಾಗವಿಲ್ಲ..."

ಜನ್ಮದಿನದ ಶುಭಾಶಯಗಳನ್ನು ಕೋರುತ್ತಿರುವ ಸಿಬ್ಬಂದಿ ವರ್ಗ



